ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಅಮರಸುಳ್ಯ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು
**ಸಹನಾ ಕಾಂತಬೈಲು**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ-ಮೇಲ್: sahithya.academy@gmail.com

**AMARASULLYA:** An Introducing Book on the Places in Karnataka that Played a Major Role in the Freedom Struggle, Written by Sahana Kanthabailu, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಸಹನಾ ಕಾಂತಬೈಲು

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೪೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಅಮರಸುಳ್ಯ ಹೋರಾಟದ ಕುರಿತು ಕರಾವಳಿ ಜಿಲ್ಲೆಗಳಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಈ ಕುರಿತು ಲಭ್ಯವಿರುವ ಪುಸ್ತಕಗಳನ್ನು ಓದಿ, ಗ್ರಹಿಸಿ, ಈ ಕಿರುಹೊತ್ತಿಗೆಯನ್ನು ನಾನು ಸಿದ್ಧಪಡಿಸಿದ್ದೇನೆ. ಇದು ಸಿಪಾಯಿದಂಗೆಗೂ ಪೂರ್ವದಲ್ಲಿ ನಡೆದ ಘಟನೆಯಾದ್ದರಿಂದ ಖಚಿತ ದಾಖಲೆಗಳು ಸುಲಭವಾಗಿ ಸಿಗುವುದಿಲ್ಲ. ಕೆಲವೊಂದು ಕಡೆ ಗೊಂದಲವೆನಿಸಿದ್ದಿದೆ. ಎನ್. ಎಸ್. ದೇವಿಪ್ರಸಾದ್, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಬಿ. ಪ್ರಭಾಕರ ಶಿಶಿಲ, ವಿದ್ಯಾಧರ ಕುಡೆಕಲ್ಲು ಅವರು ಅಮರ ಸುಳ್ಯ ಹೋರಾಟದ ಬಗ್ಗೆ ಬರೆದ ತಮ್ಮ ಪುಸ್ತಕವನ್ನು ನನಗೆ ಕೊಟ್ಟು ಸಹಕರಿಸಿದ್ದಾರೆ. ಅರೆಭಾಷೆ ಅಕಾಡೆಮಿಯ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗದ್ದೆ ಅವರು ಅರವಿಂದ ಚೊಕ್ಕಾಡಿ ಅವರ ಪುಸ್ತಕವನ್ನು ಕೊಟ್ಟಿದ್ದಾರೆ. ನಾನು ಈ ಐದು ಪುಸ್ತಕಗಳ ನೆರವಿನಿಂದ ಇದನ್ನು ಬರೆದಿದ್ದೇನೆ. ಪುಸ್ತಕಗಳ ಹೆಸರನ್ನು ಕೃತಿಯ ಕೊನೆಯಲ್ಲಿ ನೀಡಿದ್ದೇನೆ. ಬರೆಯುವಾಗ ನನಗೆ ಎದುರಾದ ಸಂಶಯಗಳನ್ನು ಬಿಳಿಮಲೆ, ಶಿಶಿಲ, ಚೊಕ್ಕಾಡಿ ಅವರು ಪರಿಹರಿಸಿ ಸಲಹೆ, ಸೂಚನೆಗಳನ್ನು ನೀಡಿರುತ್ತಾರೆ. ಈ ಐದೂ ಪುಸ್ತಕಗಳ ಲೇಖಕರಿಗೆ ನಾನು ಋಣಿಯಾಗಿದ್ದೇನೆ. ಕಜೆಗದ್ದೆಯವರಿಗೂ ಪ್ರೀತಿಯ ವಂದನೆಗಳು.

ಈ ಪುಸ್ತಕ ಬರೆಯಲು ನನಗೆ ಅವಕಾಶ ಮಾಡಿಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಿಗೂ, ಸಂಪಾದಕ ಮಂಡಳಿಯಲ್ಲಿರುವ ಕೋಡಿಬೆಟ್ಟು ರಾಜಲಕ್ಷ್ಮಿ ಅವರಿಗೂ ನನ್ನ ವಿಶೇಷ ಕೃತಜ್ಞತೆಗಳು. ನನ್ನ ಬರಹಗಳನ್ನು ಪ್ರೋತ್ಸಾಹಿಸುವ ಪತಿ ಮಹೇಶ್ವರ ಹಾಗೂ ಮಕ್ಕಳಾದ ಅಕ್ಷಯ, ಆದರ್ಶ ಅವರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ಬರೆಯಲು ಸಿಕ್ಕಿದ ಅವಧಿ ಬಹಳ ಕಡಿಮೆಯಾಯಿತು ಎನಿಸಿದರೂ, ಸಾಧ್ಯವಾದಷ್ಟು ಖಚಿತ ಬರಹವನ್ನು ಸಿದ್ಧಪಡಿಸಿದ್ದೇನೆ. ನನಗೆ ತಿಳಿದಿರುವ ವಿಚಾರಗಳನ್ನು ಬರೆದಿದ್ದೇನೆ. ನಾನು

'ಅಮರಸುಳ್ಯ' ಹೋರಾಟ ನಡೆದ ಊರಿನವಳು. ನನ್ನ ಊರಿನ ಜನರ ಹೆಮ್ಮೆ, ಅಭಿಮಾನದ ಪ್ರತೀಕವಾದ ಈ ಹೋರಾಟವನ್ನು ಕುರಿತು ಬರೆಯುವ ಅವಕಾಶ ನನಗೆ ಸಿಕ್ಕಿರುವುದು ನನ್ನ ಭಾಗ್ಯ. ಓದುಗರು ಇದನ್ನು ಸ್ವೀಕರಿಸುವಿರಾಗಿ ನಂಬಿದ್ದೇನೆ.

ತಾ. ೨೫–೧೨–೨೦೨೧ **ಸಹನಾ ಕಾಂತಬೈಲು**

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಪ್ರಸ್ತಾವನೆ ೧೩
ಹೋರಾಟದ ಹಿನ್ನೆಲೆ ೧೭
ಉಪಸಂಹಾರ ೫೫
ಆಕರ ಗ್ರಂಥಗಳು ೫೭
**ಅನುಬಂಧ**
ಛಾಯಾಚಿತ್ರಗಳು ೫೮
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೧

# ಪ್ರಸ್ತಾವನೆ

೧೮೫೭ರ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕೂ ಮುನ್ನ ಭಾರತದಾದ್ಯಂತ ಅನೇಕ ಬಗೆಯ ಹೋರಾಟಗಳು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ನಡೆದಿವೆ. ಇವುಗಳ ಸಂಖ್ಯೆ ಸುಮಾರು ನೂರಕ್ಕೂ ಹೆಚ್ಚು. ಉದಾಹರಣೆಗೆ ಬಂಗಾಳದ ಸನ್ಯಾಸೀ–ಫಕೀರರ ದಂಗೆ, ಚೋಟಾ ನಾಗಪುರದ ಸಂತಾಲಿ ದಂಗೆ, ತಮಿಳುನಾಡಿನ ವೀರ ಪಾಂಡ್ಯ ಕಟ್ಟಬೊಮ್ಮನ್ ದಂಗೆ, ರಾಜಸ್ಥಾನದ ಜಾಟರ ದಂಗೆ, ಕೇರಳದ ರಾಜಾ ಕೇರಳವರ್ಮನ ದಂಗೆ, ಉತ್ತರ ಪ್ರದೇಶದ ಬರೇಲಿ ಬಂಡಾಯ, ಬುಂದೇಲ್‌ಖಂಡದ ರಾಣಿ ಲಕ್ಷ್ಮೀಬಾಯಿ ದಂಗೆ, ಕಿತ್ತೂರಿನ ರಾಣಿ ಚೆನ್ನಮ್ಮಳ ಹೋರಾಟ, ಸಂಗೊಳ್ಳಿ ರಾಯಣ್ಣನ ಹೋರಾಟ, ಶಿವಮೊಗ್ಗ ಜಿಲ್ಲೆಯ ರೈತರ ಮುಂದಾಳತ್ವದ ನಗರ ಬಂಡಾಯ. ಇಂಥ ಹೋರಾಟಗಳಿಗೆ ಪೂರಕವಾಗಿ ೧೮೩೪ರಿಂದ ೧೮೩೭ರವರೆಗೆ ಸುಳ್ಯ ಪರಿಸರದಲ್ಲಿಯೂ ಒಂದು ಹೋರಾಟ ನಡೆದಿದೆ. ಇದಕ್ಕೆ ಅಮರಸುಳ್ಯದ ರೈತ ಹೋರಾಟ, ಅಮರಸುಳ್ಯದ ಸ್ವಾತಂತ್ರ್ಯ ಸಮರ, ಕೊಡಗು ಕೆನರಾ ಬಂಡಾಯ, ಅಮರಸುಳ್ಯದ ಕ್ರಾಂತಿ, ಕಲ್ಯಾಣಪ್ಪನ ಕಾಟಕಾಯಿ ಇತ್ಯಾದಿ ಹೆಸರುಗಳಿವೆ. ನಿರ್ದಿಷ್ಟ ನಾಯಕರೇ ಇಲ್ಲದೆ ನಡೆದ ಸಾಮೂಹಿಕ ಹೋರಾಟವಿದು.

ಹೋರಾಟಗಾರರಲ್ಲಿ ಬಹುತೇಕರು ಅಮರಸುಳ್ಯ ಸೀಮೆಗೆ ಸೇರಿದ ರೈತರಾದುದರಿಂದ ಇದು ಅಮರಸುಳ್ಯದ ರೈತ ಹೋರಾಟವಾಯಿತು. ಅಮರಸುಳ್ಯವು ದಂಗೆಯ ಕೇಂದ್ರವಾಗಿರುವುದರಿಂದ ಇದಕ್ಕೆ ಅಮರಸುಳ್ಯದ ಸ್ವಾತಂತ್ರ್ಯ ಸಮರ ಎಂಬ ಹೆಸರು ಬಂದಿದೆ. ಕೊಡಗಿನ ಮತ್ತು ಕೆನರಾ ಜಿಲ್ಲೆಯ ರೈತರು ಪ್ರಮುಖ ಹೋರಾಟಗಾರರಾಗಿದ್ದುದರಿಂದ ಕೊಡಗು ಕೆನರಾ ರೈತ ಬಂಡಾಯವೆಂಬ ಹೆಸರು ಬಂತು. ಕಾಟಕಾಯಿ ಎಂದರೆ ಲೂಟಿ ಅಥವಾ ದರೋಡೆ ಎಂದು ಅರ್ಥ. ಆದರೆ ಕಲ್ಯಾಣಪ್ಪನ ಕಾಟಕಾಯಿ ಲೂಟಿಯಾಗಿರಲಿಲ್ಲ. ಏಕೆಂದರೆ ಸಂಪತ್ತನ್ನು ದೋಚುವುದು ಹೋರಾಟಗಾರರ ಗುರಿಯಾಗಿರಲಿಲ್ಲ.

ಬ್ರಿಟಿಷರನ್ನು ಓಡಿಸುವುದೇ ಅವರ ಗುರಿಯಾಗಿತ್ತು. ಹಾಗಾಗಿ ಇದನ್ನು ಲೂಟಿ ಎಂದು ಕರೆಯಲು ಬರುವುದಿಲ್ಲ. ಈ ಹೋರಾಟವು ಬಹಳ ಪ್ರಬಲವೂ, ಪ್ರಭಾವಶಾಲಿಯಾದದ್ದೂ ಆಗಿತ್ತು. ಇದರ ಮಹತ್ವವನ್ನು ಕಡಿಮೆ ಮಾಡಲೆಂದೇ ಬ್ರಿಟಿಷರು ಮತ್ತು ಬ್ರಿಟಿಷರನ್ನು ಬೆಂಬಲಿಸಿದವರು ಇದನ್ನು ಕಾಟಕಾಯಿ (ದರೋಡೆ) ಎಂಬಂತೆ ಬಿಂಬಿಸಿದರು.

ಅಮರಸುಳ್ಯದ ಕ್ರಾಂತಿ ಹೊರನೋಟಕ್ಕೆ ಪ್ರಾದೇಶಿಕ ವ್ಯಾಪ್ತಿಯದೆಂದು ತೋರಿದರೂ ಅದರ ಚಿಂತನೆ, ರಚನೆ ಮತ್ತು ಸ್ವರೂಪ ರಾಷ್ಟ್ರೀಯ ವ್ಯಾಪ್ತಿಯುಳ್ಳದ್ದು. ಸ್ವದೇಶೀ ಕ್ರಾಂತಿಯ ಕಿಡಿ ಇಲ್ಲಿಂದ ಪ್ರಜ್ವಲಿಸಿ ಬಲಿಷ್ಠ ಬ್ರಿಟಿಷ್ ಕಂಪನಿ ಸರಕಾರವನ್ನು ಅಲ್ಲಾಡಿಸಿತು. ಇದು ಜನತಾ ಬಂಡಾಯ. ಹೋರಾಟದ ನಾಯಕತ್ವದಲ್ಲಿ ಗೌಡರು ಜಾಸ್ತಿ ಕಾಣಿಸಿಕೊಂಡರೂ ಇದು ಗೌಡರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಜೈನರು, ಬಂಟರು, ಲಿಂಗಾಯತರು, ಸ್ಥಾನಿಕ ಬ್ರಾಹ್ಮಣರು, ಮುಸ್ಲಿಮರು, ಮಲೆ ಕುಡಿಯರು, ಪ್ರಾತಿನಿಧಿಕವಾಗಿ ಕೊಡವರು ಇದರಲ್ಲಿ ಪಾಲ್ಗೊಂಡಿದ್ದರು. ಇವರೆಲ್ಲರೂ ರೈತರು ಮತ್ತು ಗ್ರಾಮೀಣ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡ ಸಾಮಾನ್ಯ ಜನರಾಗಿದ್ದರು. ಇವರೆಲ್ಲ ಈಗಿನ ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ, ಅರಕಲಗೂಡು, ಸಕಲೇಶಪುರ, ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳ ಹಾಗೂ ಕೇರಳದ ಕಾಸರಗೋಡು ಜಿಲ್ಲೆಗೆ ಸೇರಿದವರಾಗಿದ್ದರು. ಈ ಹೋರಾಟಕ್ಕೆ ಸಂಬಂಧಿಸಿದ ಕೆಲವು ಕಥನಗಳಲ್ಲಿ ಹೋರಾಟಗಾರರನ್ನು 'ಕೊತ್ತಳಿಗೆ (ತೆಂಗಿನ ಗರಿಯ ಪ್ರಾರಂಭದ ಗಟ್ಟಿ ಭಾಗ) ವೀರರು' ಎಂದು ಹೇಳಲಾಗಿದೆ. ಕೈಯಲ್ಲಿ ಆಯುಧವೇ ಇಲ್ಲದವರು ಕೈಗೆ ಸಿಕ್ಕಿದ ಕೊತ್ತಳಿಗೆ, ದೊಣ್ಣೆಗಳನ್ನೆಲ್ಲ ಹಿಡಿದು ಹೋರಾಟಕ್ಕೆ ಬಂದಿದ್ದರು ಎಂದರೆ ಬ್ರಿಟಿಷರನ್ನು ಹೊರಹಾಕಬೇಕೆಂಬ ಅವರ ರೋಷ ಎಷ್ಟಿತ್ತೆಂಬುದು ತಿಳಿಯುತ್ತದೆ.

'ಅಮರಸುಳ್ಯ' ಪರಿಕಲ್ಪನೆಗೆ ಒಂದು ವಿವರಣೆ ಹೀಗಿದೆ. ೧೮೩೦ರ ಹೊತ್ತಿಗೆ ಆಗಿನ ಬಂಟ್ವಾಳ ಸೀಮೆಗೆ ಸೇರಿದ, ಈಗ ಸುಳ್ಯ ತಾಲ್ಲೂಕಿನಲ್ಲಿರುವ ದೊಡ್ಡ ತೋಟ, ಎಲಿಮಲೆ, ದೇವಚಳ್ಳ ಮತ್ತು ಗುತ್ತಿಗಾರು ಗ್ರಾಮಗಳು ಒಟ್ಟಾಗಿ 'ಮೂಡ್ನೂರು ಸೀಮೆ' (ಮೂಡು ಎಂದರೆ ಸೂರ್ಯ ಮೂಡುವ ಪೂರ್ವ ದಿಕ್ಕು) ಎಂದು ಕರೆಯಿಸಿಕೊಳ್ಳುತ್ತಿತ್ತು. ದೊಡ್ಡತೋಟದ ಪಶ್ಚಿಮ (ಪಡುವಲ) ಭಾಗಕ್ಕಿರುವ ಚೊಕ್ಕಾಡಿ, ಐವರ್ನಾಡು, ಡೆಮ್ಮಲೆ, ಬೆಳ್ಳಾರೆ ಪ್ರದೇಶಗಳನ್ನು 'ಪಡ್ನೂರು ಸೀಮೆ' ಎನ್ನುತ್ತಿದ್ದರು. ಮುಡ್ನೂರು ಮತ್ತು ಪಡ್ನೂರು



ಸೀಮೆಗಳನ್ನು ಒಟ್ಟಾಗಿ 'ಅಮರ ಸೀಮೆ' ಎಂದು ಜನ ಕರೆಯುತ್ತಿದ್ದರು. ಗೌಡ ಕನ್ನಡದಲ್ಲಿ ಮತ್ತು ತುಳುವಿನಲ್ಲಿ 'ಅಮರ್' ಎಂದರೆ 'ಅವಳಿ' ಎಂದು ಅರ್ಥ. ಅಮರಸೀಮೆಗೆ ತಾಗಿದಂತೆ ಪಯಸ್ವಿನಿ ನದಿಯ ಬಲದಂಡೆಯಲ್ಲಿರುವುದು ಸುಳ್ಯ ಸೀಮೆ. ಅರಂತೋಡು, ಉಬರಡ್ಕ ಮಿತ್ತೂರು, ಪೇರಾಲು ಮತ್ತು ಜಾಲ್ಸೂರುಗಳನ್ನು ಸುಳ್ಯ ಸೀಮೆ ಒಳಗೊಳ್ಳುತ್ತದೆ. ಅಮರ ಸೀಮೆ ಮತ್ತು ಸುಳ್ಯ ಸೀಮೆಗಳೆರಡೂ ಒಟ್ಟಾಗಿ 'ಅಮರಸುಳ್ಯ' ಎಂದು ಗುರುತಿಸಿಕೊಂಡಿತ್ತು.

## ಹೋರಾಟದ ಹಿನ್ನೆಲೆ

ಅಮರಸುಳ್ಯದ ರೈತರ ಸಂಘರ್ಷಕ್ಕೆ ಕಾರಣಗಳು ಹಲವು ಇವೆ. ಅವುಗಳಲ್ಲಿ ಮುಖ್ಯವಾದ ನಾಲ್ಕು ಕಾರಣಗಳೆಂದರೆ:

೧. ೧೮೩೪ರಲ್ಲಿ ಕೊಡಗಿನ ಅರಸ ಚಿಕ್ಕವೀರ ರಾಜೇಂದ್ರನನ್ನು ಬ್ರಿಟಿಷರು ಸಿಂಹಾಸನದಿಂದ ಕೆಳಗಿಳಿಸಿದ್ದು.

೨. ಅದೇ ವರ್ಷ ಪುತ್ತೂರು ಮತ್ತು ಸುಳ್ಯಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸಿ ಕೆನರಾ ಜಿಲ್ಲೆಗೆ ಸೇರ್ಪಡಿಸಿದ್ದು.

೩. ಕಂದಾಯವಾಗಿ ಉತ್ಪತ್ತಿಯ ಶೇಕಡಾ ೫೦ ಭಾಗವನ್ನು ನಗದು ರೂಪದಲ್ಲಿ ಈಸ್ಟ್ ಇಂಡಿಯಾ ಕಂಪೆನಿಗೆ ಕಟ್ಟಬೇಕೆಂಬ ಆದೇಶ ಹೊರಡಿಸಿದ್ದು.

೪. ಉಪ್ಪು ಮತ್ತು ಹೊಗೆಸೊಪ್ಪುಗಳ ಉತ್ಪಾದನೆಯ ಏಕಸ್ವಾಮ್ಯವನ್ನು ಸರಕಾರವೇ ತನ್ನ ವಶಕ್ಕೆ ತೆಗೆದುಕೊಂಡದ್ದು.

ಅಮರಸುಳ್ಯ ಸೀಮೆ ಬಹಳ ವರ್ಷಗಳ ಹಿಂದಿನಿಂದಲೂ ಕೊಡಗಿನ ಒಂದು ಭಾಗವಾಗಿತ್ತು. ಇದನ್ನು ಇಕ್ಕೇರಿಯ ಶಿವಪ್ಪ ನಾಯಕ ಕೊಡಗಿನ ಮುದ್ದುರಾಜನಿಗೆ ನೀಡಿದ್ದ. ಕೊಡಗನ್ನು ೧೬೦೦ರಿಂದ ೧೮೩೪ರವರೆಗೆ ಆಳಿದ ಹಾಲೇರಿ ರಾಜವಂಶೀಯರು ಮೂಲತಃ ಇಕ್ಕೇರಿಯವರು. ಮುದ್ದುರಾಜನಿಗೆ ಗಂಡುಸಂತಾನವಾದಾಗ ಶಿವಪ್ಪ ನಾಯಕ ಕೊಡಗಿಗೆ ಈ ಭೂಭಾಗವನ್ನು ಉಡುಗೊರೆಯಾಗಿ ನೀಡಿದ. ಅಂದಿನಿಂದ ಈ ಭಾಗದ ಜನರು ರಾಜರ ಆಡಳಿತಕ್ಕೆ ಒಳಪಟ್ಟರು. ೧೮೩೪ರಲ್ಲಿ ಬ್ರಿಟಿಷರು ಕೊಡಗಿನ ದೊರೆ ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಗೊಳಿಸಿ ಕೊಡಗಿನಲ್ಲಿ ಕಂಪನಿ ಆಡಳಿತವನ್ನು ಹೇರಿದರು. ತಮ್ಮ ರಾಜನನ್ನು ಕೊಡಗಿನಿಂದ ಹೊರದಬ್ಬಿದ್ದು

ತಮಗೆ ಆದ ಅವಮಾನ ಎಂದು ಪ್ರಜೆಗಳು ಭಾವಿಸಿದರು. ಹೆಚ್ಚಿನ ಜನರಿಗೆ ರಾಜಾಡಳಿತ ಕೊನೆಗೊಂಡದ್ದು ಇಷ್ಟವಾಗಲಿಲ್ಲ. ಬ್ರಿಟಿಷರ ಆಗಮನ ಹಿತ ಅನ್ನಿಸಲಿಲ್ಲ. ಜನರಿಗೆ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಲು ಕಷ್ಟವಾಯಿತು. ಇದರಿಂದ ಜನ ಇಂಗ್ಲಿಷರ ವಿರುದ್ಧ ಕೋಪೋದ್ರಿಕ್ತರಾದರು.

ಚಿಕ್ಕವೀರ ರಾಜೇಂದ್ರರು ಪದಚ್ಯುತಿಯಾದ ೧೮೩೪ರ ಸುಮಾರಿನಲ್ಲಿ ಕೊಡಗು ರಾಜ್ಯವು ಪೂರ್ವದಲ್ಲಿ ಕುಶಾಲನಗರದಿಂದ ಪ್ರಾರಂಭವಾಗಿ ಪಶ್ಚಿಮದಲ್ಲಿ ಪುತ್ತೂರಿನವರೆಗೆ ವ್ಯಾಪಿಸಿತ್ತು. ಪುತ್ತೂರು ಈಗ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದೆ. ಆದರೆ ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪುತ್ತೂರು, ಸುಳ್ಯ, ಬೆಳ್ಳಾರೆ, ಪಂಜ, ಕುಕ್ಕೆ ಸುಬ್ರಹ್ಮಣ್ಯ, ಕಡಬ ಮುಂತಾದ ಪ್ರದೇಶಗಳೆಲ್ಲವೂ ೧೮೩೪ರಲ್ಲಿ ಕೊಡಗು ರಾಜ್ಯಕ್ಕೆ ಸೇರಿದ್ದು, ಇದನ್ನು ಕೆಳಗಿನ ಕೊಡಗು ಎಂದು ಕರೆಯುತ್ತಿದ್ದರು. ಈ ಪ್ರದೇಶಕ್ಕೂ ಚಿಕ್ಕವೀರ ರಾಜೇಂದ್ರನೇ ರಾಜರಾಗಿದ್ದನು. ಈಗ ಕೊಡಗು ಜಿಲ್ಲೆಯಲ್ಲಿರುವ ಮಡಿಕೇರಿ, ಸೋಮವಾರ ಪೇಟೆ, ವಿರಾಜಪೇಟೆ ತಾಲ್ಲೂಕುಗಳು ಮೇಲಿನ ಕೊಡಗು ಎಂದು ಕರೆಯಲ್ಪಟ್ಟಿದ್ದು ಈ ಭಾಗಗಳು ಕೂಡ ಚಿಕ್ಕವೀರ ರಾಜನ ಆಡಳಿತಕ್ಕೆ ಒಳಪಟ್ಟಿದ್ದವು.

೧೮೩೪ರ ಸುಮಾರಿನಲ್ಲಿ ಪುತ್ತೂರಿನಿಂದ ಪಶ್ಚಿಮಕ್ಕೆ ಅಂದರೆ ಮಾಣಿ, ಬಂಟ್ವಾಳ, ಫರಂಗಿಪೇಟೆ, ಮಂಗಳೂರು, ಉಳ್ಳಾಲ, ಕುಂಬಳೆ, ಮಂಜೇಶ್ವರ, ಮೂಡುಬಿದಿರೆ, ಕಾರ್ಕಳ ಪ್ರದೇಶಗಳೆಲ್ಲ ಕರಾವಳಿಯ ಭಾಗಗಳಾಗಿದ್ದವು. ಈ ಭಾಗಗಳು ಕೊಡಗಿನ ಕೊನೆಯ ರಾಜ ಚಿಕ್ಕವೀರ ಪದಚ್ಯುತನಾಗುವ ಮೊದಲೇ ಬ್ರಿಟಿಷರ ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದವು. ಆದರೆ ಸುಳ್ಯ, ಪುತ್ತೂರು ಮತ್ತು ಪುತ್ತೂರಿನಿಂದ ಪಶ್ಚಿಮಕ್ಕೆ ಮಾಣಿಯವರೆಗಿನ ಪ್ರದೇಶಗಳು ಕೆಳಕೊಡಗು ಎಂದು ಕರೆಯಲ್ಪಟ್ಟು ಕೊಡಗು ರಾಜರ ಅಧೀನದಲ್ಲಿದ್ದವು. ಅಮರಸುಳ್ಯದ ಸ್ವಾತಂತ್ರ್ಯ ಸಮರವು ಮೇಲಿನ ಕೊಡಗು, ಕೆಳ ಕೊಡಗು ಮತ್ತು ಅಂದಿನ ದಕ್ಷಿಣ ಕನ್ನಡ ಮೂರೂ ಭಾಗಗಳಲ್ಲೂ ನಡೆದಿತ್ತು. ಆದರೆ ಒಂದೇ ಹೋರಾಟಕ್ಕೆ ಮೇಲಿನ ಕೊಡಗು, ಕೆಳಗಿನ ಕೊಡಗು ಮತ್ತು ಅಂದಿನ ದಕ್ಷಿಣ ಕನ್ನಡದಲ್ಲಿ ಕಾರಣವಾದ ಅಂಶಗಳಲ್ಲಿ ವ್ಯತ್ಯಾಸಗಳಿವೆ.

ಆಗ ಕೊಡಗಿಗೆ ತಾಗಿಕೊಂಡಿದ್ದ ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಕೆನರಾ ಜಿಲ್ಲೆ ಎಂದು ಕರೆಯಲಾಗುತ್ತಿತ್ತು. ಅದರಲ್ಲಿ ಈಗಿನ ದಕ್ಷಿಣ ಕನ್ನಡ,



ಕಾಸರಗೋಡು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಬಹುಭಾಗ ಒಳಗೊಂಡಿದ್ದವು. ೧೭೯೯ರಲ್ಲಿ ಟಿಪ್ಪುವನ್ನು ಕೊಂದ ಬಳಿಕ ಕೆನರಾ ಜಿಲ್ಲೆಯನ್ನು ನೇರವಾಗಿ ತನ್ನ ಆಡಳಿತಕ್ಕೆ ಕಂಪನಿ ಒಳಗೊಳಿಸಿತ್ತು. ೧೮೩೪ರಲ್ಲಿ ಕೊಡಗು ಕೂಡಾ ಕಂಪನಿ ಆಡಳಿತಕ್ಕೆ ಒಳಪಟ್ಟಿತು. ನಂತರ ಸ್ವಲ್ಪ ಸಮಯದಲ್ಲಿ ಸಂಪಾಜೆಯಿಂದಾಚೆಗೆ ಕರಾವಳಿ ಕಡೆಗಿನ ಕೆಳಕೊಡಗು ಎಂದು ಕರೆಯಲ್ಪಡುತ್ತಿದ್ದ ಪ್ರದೇಶವನ್ನು, ಅಂದರೆ ಮೊದಲು ಕೊಡಗಿನ ಹಾಲೇರಿ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಅಮರಸುಳ್ಯ, ಪಂಜ, ಬೆಳ್ಳಾರೆ, ಪುತ್ತೂರು, ನೆಟ್ಟಣಿಗೆ, ಯೇನೆಕಲ್ಲು, ಅಡೂರು ಮಾಗಣೆಗಳನ್ನು ಕೆನರಾ ಜಿಲ್ಲೆಗೆ ಸೇರಿಸಲಾಯಿತು. ಕಂಪೆನಿ ಸರಕಾರದ ಈ ತೀರ್ಮಾನವು ಈ ಭಾಗದ ಜನರಿಗೆ ಒಪ್ಪಿಗೆಯಾಗಲಿಲ್ಲ. ಅವರು ನೂರು ವರ್ಷಗಳಿಗಿಂತ ಹೆಚ್ಚು ಕಾಲ ಹಾಲೇರಿ ರಾಜರ ಅಧೀನದಲ್ಲಿದ್ದುದರಿಂದ ಕಂಪೆನಿ ಸರಕಾರದ ಕಾಲದಲ್ಲೂ ಕೊಡಗಿನ ಆಡಳಿತಾಧಿಕಾರಿಗಳ ಅಧೀನದಲ್ಲೆ ಮುಂದುವರಿಯಲು ಇಷ್ಟಪಟ್ಟರು. ಜನತಾ ಹೋರಾಟದ ಸಂಘಟನೆ ಮತ್ತು ನಿರ್ವಹಣೆಯ ಅತ್ಯಂತ ತೀಕ್ಷ್ಣವಾದ ಕ್ಷೇತ್ರ ಇದೇ ಆಗಿತ್ತು.

ಕೆಳ ಕೊಡಗು ಕೆನರಾ ಜಿಲ್ಲೆಗೆ ಸೇರ್ಪಡೆಗೊಳ್ಳುವುದರಿಂದ ಬಹಳ ಸಮಸ್ಯೆಗಳು ತಲೆದೋರಿದವು. ಯಾವಾಗ ಬ್ರಿಟಿಷರು ಅಮರಸುಳ್ಯ ಮತ್ತು ಪುತ್ತೂರಿನ ೧೧೦ ಗ್ರಾಮಗಳನ್ನು ಕೆನರಾಕ್ಕೆ ಸೇರಿಸಿದರೋ ಆಗ ಅಸಮಾಧಾನ ಭುಗಿಲೆದ್ದಿತು. ಅಲ್ಲಿವರೆಗೆ ಅಂದರೆ ಕೊಡಗಿನ ಅಧೀನದಲ್ಲಿರುವವರೆಗೆ ಕಂದಾಯ ವ್ಯವಸ್ಥೆ ಬಹಳ ಕಡಿಮೆ ಇತ್ತು. ರಾಜರಿಗೆ ಒಪ್ಪಿಸಬೇಕಾದ ತೆರಿಗೆಯನ್ನು ರೈತರು ಕೃಷಿ ಉತ್ಪನ್ನಗಳ ರೂಪದಲ್ಲಿ ಕೊಟ್ಟರೆ ಸಾಕಾಗುತ್ತಿತ್ತು. ಹಣದ ರೂಪದಲ್ಲಿ ಪಾವತಿಸುವ ಅಗತ್ಯವಿರಲಿಲ್ಲ. ನಗದು ರೂಪದಲ್ಲಿ ತೆರಿಗೆ ಕೊಡಬೇಕೆಂಬ ಈಸ್ಟ್ ಇಂಡಿಯಾ ಕಂಪನಿಯ ಆದೇಶ ಈ ಭಾಗದ ಜನರಿಗೆ ದೊಡ್ಡ ಹೊಡೆತವಾಗಿತ್ತು. ಈಗ ರೈತರು ತಾವು ಬೆಳೆದ ಬೆಳೆಗಳನ್ನು ಮಧ್ಯವರ್ತಿಗಳಿಗೆ ಮಾರಲೇಬೇಕಾಯಿತು. ಇದರ ಲಾಭ ಪಡೆಯಲು ಮಂಗಳೂರು–ಬಂಟ್ವಾಳದ ಕಡೆಯಿಂದ ವ್ಯಾಪಾರಿಗಳು ಸುಳ್ಯದ ಕಡೆ ಧಾವಿಸಿ ಬಂದರು. ಬೆಳೆಗಳಿಗೆ ವ್ಯಾಪಾರಿಗಳು ಬೆಲೆಕಟ್ಟುವ ಸ್ಥಿತಿ ನಿರ್ಮಾಣವಾಯಿತು. ಬ್ರಿಟಿಷರು ವಿಧಿಸುತ್ತಿದ್ದ ಭೂ ಕಂದಾಯ ಸಾಮಾನ್ಯ ಜನರಿಗೆ ಭಾರವೆನಿಸಿತ್ತು. ಕೃಷಿಫಸಲು ಪ್ರತಿವರ್ಷ ಒಂದೇ ರೀತಿ ಇರುತ್ತಿರಲಿಲ್ಲ. ದೊಡ್ಡ ಜಮೀನುದಾರರಿಗೆ ಕೂಡ ಕಂದಾಯ ಕಟ್ಟಲು ಕಷ್ಟವಾಗುತ್ತಿತ್ತು. ಕಂದಾಯ ಪಾವತಿಸಲು ಸಾಧ್ಯವಾಗದೆ ಹಲವರು

ತಮ್ಮ ಆಸ್ತಿಪಾಸ್ತಿಗಳನ್ನು ಮಾರಾಟ ಮಾಡುವುದು ಅನಿವಾರ್ಯವಾಯಿತು. ಕಂದಾಯ ಸಲ್ಲಿಸಲು ಸಾಧ್ಯವಾಗದವರ ಜಮೀನುಗಳನ್ನು ಸರಕಾರ ಮುಟ್ಟುಗೋಲು ಹಾಕಿ ಸಾರ್ವಜನಿಕವಾಗಿ ಹರಾಜಿಗೆ ಇಡುತ್ತಿದ್ದರು.

ಉಪ್ಪಿಗೆ ಸುಂಕ ವಿಧಿಸುವ ಪದ್ಧತಿ ಯಾರ ಆಳ್ವಿಕೆಯಲ್ಲೂ ಇರಲಿಲ್ಲ. ಬ್ರಿಟಿಷರು ಉಪ್ಪಿಗೂ ಸುಂಕ ವಿಧಿಸಿದರು. ಅಮರಸುಳ್ಯ ಸೀಮೆಯ ಜನರ ಇನ್ನೊಂದು ಅಗತ್ಯದ ವಸ್ತುವಾದ ಹೊಗೆಸೊಪ್ಪಿನ ಕೃಷಿ ಹಾಗೂ ಸಾಗಾಟದ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಲಾಯಿತು. ಶೇಕಡಾ ೧೦ರಷ್ಟು ಕಂದಾಯ ಕೊಡುತ್ತಿದ್ದವರು ಈಗ ಶೇಕಡಾ ೫೦ರಷ್ಟು ಕಂದಾಯ ಕೊಡಬೇಕಾಗಿ ಬಂತು. ಅದರ ಮೇಲೆ ಬೇರೆ ತೆರಿಗೆಗಳೂ ಇದ್ದವು. ಇದು ನಿಜಕ್ಕೂ ಅಸಹನೀಯವಾಗಿತ್ತು. ಆದುದರಿಂದ ಸೌಮ್ಯವಾದಿ ರೈತರು ಕೈಯಲ್ಲಿ ಕೋವಿ ಹಿಡಿದು ಇಂಗ್ಲಿಷರ ವಿರುದ್ಧ ಸಮರ ಸಾರಲೇಬೇಕಾದ ಅನಿವಾರ್ಯತೆ ಮೂಡಿತು. ಒಟ್ಟಿನಲ್ಲಿ ರೈತರು ತೆರಿಗೆಯನ್ನು ನಗದು ರೂಪದಲ್ಲೆ ಕೊಡಬೇಕು ಎಂಬ ಬ್ರಿಟಿಷರ ನಿಲುವು ಹೋರಾಟಕ್ಕೆ ಬಹು ಮುಖ್ಯ ಕಾರಣ.

ಬ್ರಿಟಿಷರು ಉಪ್ಪು ಮತ್ತು ಹೊಗೆಸೊಪ್ಪನ್ನು ಕೆಲವೇ ನಿಯಂತ್ರಿತ ವ್ಯಾಪಾರಿಗಳು ಮಾತ್ರ ಮಾರಾಟ ಮಾಡಬಹುದೆಂದು ಮಾಡಿದರು. ಸರಕಾರವೇ ಅದನ್ನು ಯಾರಿಗೆ ಕೊಡಬೇಕೆನ್ನುವುದನ್ನು ತೀರ್ಮಾನಿಸುತ್ತಿತ್ತು. ಉಳಿದ ವ್ಯಾಪಾರಿಗಳು ಹೊಗೆಸೊಪ್ಪು ಮತ್ತು ಉಪ್ಪನ್ನು ಮಾರುವ ಹಾಗಿರಲಿಲ್ಲ, ರೈತರು ಅವುಗಳನ್ನು ಬೆಳೆಯುವ ಹಾಗೂ ಇಲ್ಲ. ಸರಕಾರ ಹೇಳಿದವರು ಮಾತ್ರ ಬೆಳೆಯಬೇಕು ಎನ್ನುವ ಏಕಸ್ವಾಮ್ಯ ಕಾಯಿದೆ ಬಂತು. ಇದು ಜನರಿಗೆ ಸಮಸ್ಯೆಯನ್ನು ಉಂಟುಮಾಡಿತು. ಹೀಗೆ ಈ ಭಾಗದ ಜನರ ಅತೃಪ್ತಿಯು ೧೮೩೭ರ ಹೋರಾಟಕ್ಕೆ ಕಾರಣವಾಯಿತು. ಜೊತೆಗೆ ಕೆಲವು ಪದಚ್ಯುತ ಪಾಳೆಯಗಾರರಿಗೆ ನೀಡಲಾಗುತ್ತಿದ್ದ ನಗಣ್ಯ ಮೊತ್ತದ ರಾಜಧನ ಸಹ ಅತೃಪ್ತಿಗೆ ಇನ್ನೊಂದು ಕಾರಣ ಎನ್ನಲಾಗಿದೆ. ಈ ಸಂಗ್ರಾಮದಲ್ಲಿ ಕೊಡಗಿನವರ ಭಾಗವಹಿಸುವಿಕೆ ಕಡಿಮೆ ಇತ್ತು. ಏಕೆಂದರೆ ಕೊಡಗಿನಲ್ಲಿ ಕಂದಾಯ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಬ್ರಿಟಿಷ್ ಅಧಿಕಾರಿಗಳು ಹೋಗಲಿಲ್ಲ. ರಾಜರ ಕಾಲದಲ್ಲಿ ಯಾವ ವ್ಯವಸ್ಥೆ ಇತ್ತೋ ಅದನ್ನೇ ಮುಂದುವರಿಸಿದರು. ಕೊಡಗಿನ ದಿವಾನರಾದ ಪೊನ್ನಪ್ಪ ಮತ್ತು ಬೋಪು ಅವರಿಗೆ ದೊಡ್ಡ ಅಧಿಕಾರ ಕೊಟ್ಟರು. ಹೀಗೆ



ಕೊಡವರನ್ನು ಒಲಿಸಿಕೊಂಡರು. ಇನ್ನು ಅಲ್ಲಿ ಬ್ರಿಟಿಷರ ವಿರುದ್ಧ ಯಾರು ನಿಲ್ಲಬೇಕು? ಹಾಗೆ ಕೊಡಗಿನಿಂದ ಬಹುಸಂಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು ತಯಾರಾಗಲಿಲ್ಲ.

## ಹೋರಾಟದ ವಿವರಗಳು

ಅಮರಸುಳ್ಯದ ಸ್ವಾತಂತ್ರ್ಯ ಹೋರಾಟದಲ್ಲಿ ಮುಖ್ಯವಾಗಿ ಕೇಳಿಬರುವ ಹೆಸರುಗಳೆಂದರೆ ಅಪರಂಪಾರ, ಹುಲಿ ಕಡಿದ ನಂಜಯ್ಯ, ಪುಟ್ಟ ಬಸಪ್ಪ ಮತ್ತು ಕಲ್ಯಾಣಸ್ವಾಮಿ. ಈ ನಾಲ್ವರೂ ಜಂಗಮ ವೇಷಧಾರಿಗಳಾಗಿ ಜನರ ಬೆಂಬಲ ಪಡೆಯಲು ಪ್ರಯತ್ನಿಸಿದವರು. ಆದರೆ ಇವರು ಕೊಡಗಿನ ಅರಸು ಮನೆತನಕ್ಕೆ ಸಂಬಂಧಿಸಿದವರೋ ಅಥವಾ ಹೊರಗಿನವರೋ ಗೊತ್ತಿಲ್ಲ.

ಹೋರಾಟ ಸ್ವಾಮಿ ಅಪರಂಪಾರನಿಂದ ಮೊದಲಾಯಿತೆಂದು ಹೇಳಬಹುದು. ಅಪರಂಪಾರ ಪ್ರಚಂಡ ಜ್ಞಾನಿಯಾದ ಜಂಗಮ. ಒಂದು ಊಹೆಯ ಪ್ರಕಾರ ಇವನು ತುಮಕೂರು ಜಿಲ್ಲೆಯ ಮಾಯಸಂದ್ರ ತಾಲ್ಲೂಕಿನ ಕಡಗನೂರು ಎಂಬ ಊರಿನವನು. ಈತನ ತಂದೆಯ ಹೆಸರು ಹನುಮಂತರಾಯ, ತಾಯಿಯ ಹೆಸರು ಗೋಪಮ್ಮ. ಈತನಿಗೆ ಹೆಂಡತಿ, ಒಬ್ಬ ಮಗಳು ಇದ್ದರು. ಆದರೆ ಈತನು ತನ್ನ ಚಿಕ್ಕಪ್ರಾಯದಲ್ಲೇ ಊರನ್ನು ಬಿಟ್ಟು ಸನ್ಯಾಸಿಯಾದ. ಆತನು ೧೮೦೭ರಲ್ಲಿ ತನ್ನ ಊರನ್ನು ಬಿಟ್ಟು ಹೋದವನು ೨೦ ವರ್ಷಗಳ ನಂತರ ಒಬ್ಬ ದೊಡ್ಡ ಜಂಗಮನಂತೆ ವೇಷ ತಾಳಿ ತಿರುಗಿ ಗ್ರಾಮಕ್ಕೆ ಬಂದನು. ಸ್ವಲ್ಪ ದಿವಸಗಳಲ್ಲಿ ದೊಡ್ಡ ಗುರುವೆಂದು, ಪವಾಡಗಳನ್ನು ಮಾಡಬಲ್ಲವನೆಂದು, ತನ್ನ ಜ್ಞಾನಶಕ್ತಿಯಿಂದ ಆ ಊರಿನ ಜನರ ಪೂರ್ವೋತ್ತರಗಳನ್ನು ಹೇಳಬಲ್ಲವನೆಂದು ಪ್ರಸಿದ್ಧಿ ಪಡೆದನು. ಅಂದಿನಿಂದ ಅವನಿಗೆ ಅನೇಕ ಶಿಷ್ಯರಾದರು. ಬ್ರಿಟಿಷರು ಭಾರತೀಯರನ್ನು ಮತಾಂತರಿಸದಂತೆ ನೋಡಿಕೊಳ್ಳುವ ಉದ್ದೇಶದಿಂದ ಕೊಡಗಿನಾದ್ಯಂತ ಜಂಗಮನಾಗಿ ಸಂಚರಿಸುತ್ತಿದ್ದನು. ೧೮೩೫ರಲ್ಲಿ ಅವನು ಬ್ರಿಟಿಷರ ಬಂದಿಯಾದರೂ ದೂರದ ತಿರುಚಿರಾಪಳ್ಳಿಯ ಸೆರೆಮನೆಯಲ್ಲಿದ್ದುಕೊಂಡೇ ಶಿಸ್ತುಬದ್ಧ ಹೋರಾಟವೊಂದಕ್ಕೆ ಯೋಜನೆಯನ್ನು ರೂಪಿಸಿದನು. ಬೌದ್ಧಿಕವಾಗಿ ತನ್ನ ಸಮಕಾಲೀನರಿಗಿಂತ ಆತ ಬಹಳಷ್ಟು ಮುಂದಿದ್ದನು. ಅವನ ದೂರದೃಷ್ಟಿ ಎಣೆಯಿಲ್ಲದುದಾಗಿತ್ತು.

ಕಲ್ಯಾಣಸ್ವಾಮಿಯು ಚಿಕ್ಕವೀರ ರಾಜನ ಸುಬೇದಾರ. ಹಾಲೇರಿಯ ರಾಜಧ್ವಜ ಮಡಿಕೇರಿಯ ಕೋಟೆಯಿಂದ ಕೆಳಗಿಳಿದು ಬ್ರಿಟಿಷರ ಧ್ವಜ ಮೇಲಕ್ಕೇರುವುದನ್ನು ಕಾಣಲಾಗದೆ ಮಡಿಕೇರಿಯಿಂದ ಕಾಲುಕಿತ್ತು ಏಳು ಸಾವಿರ ಸೀಮೆಯತ್ತ (ಶನಿವಾರಸಂತೆ, ಕೊಡಲಿಪೇಟೆ ಭಾಗ) ದೌಡಾಯಿಸಿದವ. ಬ್ರಿಟಿಷರನ್ನು ಎದುರಿಸಲು ಸಾಧ್ಯವೇ ಇಲ್ಲವೆಂಬ ಸತ್ಯದ ಅರಿವಾಗಿ ವೈರಾಗ್ಯ ಮೂಡಿ ಜಂಗಮನಾದವ.

ಪುಟ್ಟ ಬಸಪ್ಪ ಶನಿವಾರಸಂತೆಯ ಒಬ್ಬ ರೈತ. ಸೋಮಾರಿಯಾಗಿದ್ದ ಇವನನ್ನು ಹೆಂಡತಿ ಮನೆಯಿಂದ ಹೊರಗೆ ಹಾಕಿದ ಮೇಲೆ ಓರ್ವ ಜಂಗಮನಾದವ. ಹುಲಿ ಕಡಿದ ನಂಜಯ್ಯ ಮತ್ತು ಕೆದಂಬಾಡಿ ರಾಮಗೌಡನ ಪ್ರಯತ್ನದಿಂದಾಗಿ ಸ್ವಾತಂತ್ರ್ಯ ಹೋರಾಟದ ನಾಯಕನ ಸ್ಥಾನಕ್ಕೆ ಏರಿದವ. ಹಾಗೆ ನೋಡಿದರೆ ಹುಲಿಕಡಿದ ನಂಜಯ್ಯ, ಸ್ವಾಮಿ ಅಪರಂಪಾರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸಪ್ಪ ಇವರು ನಾಲ್ವರೂ ಜಂಗಮರೇ. ಈ ಅಪರಂಪಾರ ಯಾರು, ಅವನ ವ್ಯಕ್ತಿತ್ವ ಏನು ಅನ್ನುವುದು ನಮಗೆ ಸ್ಪಷ್ಟವಿಲ್ಲ. ಡಾ. ಪುರುಷೋತ್ತಮ ಬಿಳಿಮಲೆ ಅವರ ಪ್ರಕಾರ ಅಪರಂಪಾರ ನಗರ ಬಂಡಾಯದಿಂದ ಬಂದವನು. ಶಿವಮೊಗ್ಗ ನಗರ ಬಂಡಾಯದಲ್ಲಿ ೧೮೩೧ರಲ್ಲಿ ಒಬ್ಬ ತಪ್ಪಿಸಿಕೊಳ್ಳುತ್ತಾನೆ. ಅವನೇ ಇವನು. ಅವನು ವೇಷ ಬದಲಿಸುವುದರಲ್ಲಿ, ಬ್ರಿಟಿಷರಿಗೆ ಚಳ್ಳೆ ಹಣ್ಣು ತಿನ್ನಿಸುವುದರಲ್ಲಿ ಪ್ರಥಮ. ಕೊನೆಗೆ ಅವನು ಜೈಲಿಗೆ ಹೋಗುವ ಸಂದರ್ಭಲ್ಲಿ ಹೇಳುತ್ತಾನೆ–'ನನಗೂ ಕೊಡಗಿನ ಅರಸರಿಗೂ ಯಾವ ಸಂಬಂಧವೂ ಇಲ್ಲ. ನನ್ನನ್ನು ಈ ಹೋರಾಟಗಾರರು ಹಿಡಿದುಕೊಂಡು ಬಂದರು'. ಬೂದಿ ಬಸವನೇ ಅಪರಂಪಾರ ಆಗಿ ಬಂದ ಎಂಬುದು ಬಿಳಿಮಲೆ ಅವರ ವಾದ. ಅಪರಂಪಾರ, ಕಲ್ಯಾಣಸ್ವಾಮಿ ಮತ್ತು ಪುಟ್ಟ ಬಸಪ್ಪ ಈ ಮೂವರೂ ಕೊಡಗಿನ ಅಪ್ಪಾಜಿ ಅರಸನ ಮಗ ಎಂದು ಹೇಳಿಕೊಂಡು ಜನಸಂಘಟನೆ ಮಾಡಿದರು. ಸುಮ್ಮನೆ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದರೆ ಯಾರೂ ಬರುವುದಿಲ್ಲ. ಕೊಡಗಿನ ಅರಸನ ಮಗ ಎಂದು ಅವರು ಹೇಳಿಕೊಂಡು ಬಂದದ್ದರಿಂದ ಕೊಡಗಿನ ಅರಸನ ಪರವಾಗಿರುವವರನ್ನೆಲ್ಲ ಸಂಘಟನೆ ಮಾಡಲು ಸಾಧ್ಯ ಆಯಿತು. ಬ್ರಿಟಿಷರ ವಿರುದ್ಧ ಜನಸಂಘಟನೆ ಮಾಡುವ ಕೆಲಸವನ್ನು ಆರಂಭಿಕ ಹಂತದಲ್ಲಿ ತೊಡಗಿಸಿದ್ದು ಅಪರಂಪಾರನೇ. ಉಳಿದವರು ಅದನ್ನೇ ಮುಂದುವರಿಸಿದ್ದು. ಅವನು ಸನ್ಯಾಸಿ ವೇಷದಲ್ಲಿ ಪ್ರತ್ಯಕ್ಷವಾದ್ದರಿಂದ ಅವನ



ಚಟುವಟಿಕೆಗಳ ಮೇಲೆ ಬ್ರಿಟಿಷರು ಮೊದ ಮೊದಲು ಗಮನ ಇಡಲಿಲ್ಲ. ಈ ದೇಶದಲ್ಲಿ ಸನ್ಯಾಸಿಗಳ ಸಂಖ್ಯೆ ಕಡಿಮೆಯಾ? ಅವನು ಅರಸು ಕುಮಾರನ ವೇಷದಲ್ಲಿ ಬಂದರೆ ಬ್ರಿಟಿಷರು ಅವನನ್ನು ಹಿಡಿದು ಜೈಲಿಗೆ ಅಟ್ಟುತ್ತಿದ್ದರು. ಅವನು ಜನಸಂಘಟನೆ ಮಾಡಲು ಅನುಸರಿಸಿದ ತಂತ್ರ ಸನ್ಯಾಸಿ ವೇಷ. ಇದು ಭಾರತೀಯ ಸ್ವಾತಂತ್ರ್ಯ ಹೋರಾಟ ಕ್ರಮದಲ್ಲಿ ಅತ್ಯಂತ ವಿನೂತನವಾದುದು. ಸನ್ಯಾಸಿಯನ್ನು ನೋಡಲು ಜನ ಬರುತ್ತಿದ್ದರು. ಆದರೆ ಅವನು ಮಾಡುತ್ತಿದ್ದದ್ದು ಹೋರಾಟದ ಪಿತೂರಿಯೇ. ಜನ ಸನ್ಯಾಸಿಯನ್ನು ನೋಡಲು ಹೋಗುತ್ತಾರೆ ಎಂದು ಬ್ರಿಟಿಷರು ಸುಮ್ಮನಿರುತ್ತಿದ್ದರು. ಬ್ರಿಟಿಷರು ಭಾರತದ ಧಾರ್ಮಿಕ ವಿಷಯದಲ್ಲಿ ಹೆಚ್ಚು ಕೈ ಹಾಕುತ್ತಿರಲಿಲ್ಲ. ಅವರಿಗೆ ಹೆದರಿಕೆ ಇತ್ತು ಮತ್ತು ಧರ್ಮದ ವಿಷಯದಲ್ಲಿ ಕೈ ಹಾಕದೆ ಇರುವುದು ಅವರ ನಿಲುವೂ ಆಗಿತ್ತು. ಅವನು ಸತ್ತು ಆರು ತಿಂಗಳಿನಲ್ಲಿ ವರದಿ ಸಿದ್ಧಪಡಿಸಿದ ಕಾಟನ್‌ಗೂ ಅಪರಂಪಾರ ಯಾರು ಎಂದು ಸ್ಪಷ್ಟವಾದ ತಿಳುವಳಿಕೆ ಇರಲಿಲ್ಲ.

## ಅಪ್ಪಾಜಿ ಅರಸನ ಮಕ್ಕಳು ಏನಾದರು?

ಚಿಕ್ಕವೀರ ರಾಜೇಂದ್ರನ ದೊಡ್ಡಪ್ಪ ಅಪ್ಪಾಜಿ ಅರಸ. ಅಪ್ಪಾಜಿ ಅರಸರಿಗೆ ವೀರರಾಜ ಅರಸ ಮತ್ತು ನಂಜುಂಡ ಅರಸ ಎಂಬ ಇಬ್ಬರು ಮಕ್ಕಳಿದ್ದರು. ಚಿಕ್ಕವೀರ ರಾಜನು ಪಟ್ಟಕ್ಕೆ ಬಂದ ಮೇಲೆ ವೀರರಾಜ ಅರಸ ಹಾಗೂ ನಂಜುಂಡ ಅರಸ ಮತ್ತು ಅವರ ಸಂಬಂಧಿಗಳಾದ ೧೪ ಮಂದಿ ರಾಜಕುಟುಂಬದವರನ್ನು ಬಂಧಿಸಿ ತಂದು ಮಡಿಕೇರಿಯ ಅರಮನೆಯ ಹಿಂದೆ ಇದ್ದ ಕೋಟೆ ಮನೆಯಲ್ಲಿ ಬಂಧನದಲ್ಲಿ ಇರಿಸಿದನು.

ಬಂಧನದಲ್ಲಿದ್ದವರಿಗೆ ಸರಿಯಾಗಿ ಆಹಾರವನ್ನು ಕೊಡದೆ ಹಸಿವಿನಿಂದ ಸಾಯುವಂತೆ ಮಾಡಲಾಯಿತು. ಚಿಕ್ಕವೀರ ರಾಜರ ದಿವಾನರಲ್ಲೊಬ್ಬರಾದ ಕುಂಟ ಬಸವನು ಬಂಧನದಲ್ಲಿದ್ದ ಅಪ್ಪಾಜಿ ಅರಸನ ಸಂಬಂಧಿಗಳು ಸತ್ತು ಹೋದ ಹಾಗೆಲ್ಲ ಹೆಣಗಳನ್ನು ಕಂಬಳಗೇರಿ ಉಕ್ಕಡ ಎಂಬ ಸ್ಥಳದ ಹತ್ತಿರದ ಕಾಡಿನಲ್ಲಿ ಹೂತು ಹಾಕಿಸುತ್ತಿದ್ದನು. ಅದೇ ರೀತಿ ವೀರರಾಜ ಅರಸ ಮತ್ತು ನಂಜುಂಡ ಅರಸ ಸತ್ತಾಗ ಹೆಣಗಳನ್ನು ಕೊಂಡೊಯ್ದು ಹೂಳಲಾಯಿತು. ಆದರೆ ಕುಂಟ ಬಸವನ ಭಟರು ಈ ಇಬ್ಬರನ್ನು ಹೂಳುವ ಹೊತ್ತಿನಲ್ಲಿ ಆ ಎರಡೂ ದೇಹದಲ್ಲಿ ಗುಟುಕು ಜೀವ ಇತ್ತು ಎಂದು ಹೇಳಲಾಗಿದೆ. ಆಗ

ಭಟರು ಮರುಕ ಪಟ್ಟು ವೀರರಾಜ ಅರಸ ಮತ್ತು ನಂಜುಂಡ ಅರಸರನ್ನು ಬಿಟ್ಟು ಬಿಟ್ಟರೆಂದೂ, ಕುಂಟ ಬಸವನಿಗೆ ತಾವು ರಾಜಕುಮಾರರನ್ನು ಹೂಳಿದೆವೆಂದು ವರದಿ ಮಾಡಿದರು ಎಂದೂ ಹೇಳಲಾಗಿದೆ. ಆ ರಾಜಕುಮಾರರನ್ನು ಅವರ ಆಪ್ತರು ರಕ್ಷಿಸಿ ಮೈಸೂರು ರಾಜ್ಯಕ್ಕೆ ಕಳಿಸಿದರೆಂದೂ, ಅಲ್ಲಿ ಅವರು ತಲೆ ಮರೆಸಿಕೊಂಡು ಜೀವನ ಮಾಡಿದರೆಂದೂ ಹೇಳಲಾಗಿದೆ.

ಬಹುತೇಕ ಇತಿಹಾಸಕಾರರು ಚಿಕ್ಕವೀರ ರಾಜೇಂದ್ರನ ದೊಡ್ಡಪ್ಪನ ಮಕ್ಕಳಾದ ವೀರರಾಜ ಅರಸ ಮತ್ತು ನಂಜುಂಡ ಅರಸ ಕೊಲ್ಲಲ್ಪಟ್ಟಿದ್ದರು ಎಂದೇ ಅಭಿಪ್ರಾಯ ಪಡುತ್ತಾರೆ. ಅದರೆ ಅವರು ಬದುಕಿದ್ದಾರೆ ಎಂಬ ವದಂತಿಗಳೇ ಹೋರಾಟದ ಸಂಘಟಿಸುವಿಕೆಗೆ ಆಧಾರವಾಗುತ್ತದೆ. ಅವರು ಸತ್ತಿದ್ದಾರೆ ಎಂಬ ನಂಬಿಕೆಯೇ ಹೋರಾಟವನ್ನು ಮೇಲಿನ ಕೊಡಗಿನಲ್ಲಿ ಹತ್ತಿಕ್ಕಲು ಕಂಪೆನಿ ಸರಕಾರಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಜನತಾ ಹೋರಾಟವನ್ನು ಅರ್ಥ ಮಾಡಿಕೊಳ್ಳಲು ಈ ಅಂಶವು ಮಹತ್ವದ್ದಾಗಿದೆ.

## ಸ್ವಾಮಿ ಅಪರಂಪಾರ

೧೮೩೩ರಲ್ಲಿ ಕೊಡಗಿನಲ್ಲಿ ಇದ್ದಕ್ಕಿದ್ದ ಹಾಗೆ ಒಬ್ಬ ಜಂಗಮ ಕಾಣಿಸಿಕೊಳ್ಳುತ್ತಾನೆ. ಅವನ ಹೆಸರು ಸ್ವಾಮಿ ಅಪರಂಪಾರ. ಚಿಕ್ಕವೀರರಾಜ ಅವನನ್ನು ಆಸ್ಥಾನಕ್ಕೆ ಕರೆಸಿ ವಿಚಾರಣೆ ನಡೆಸಿದ. ಆಗ ಅಪರಂಪಾರ ತನಗೆ ಸಿಂಹಾಸನದ ಮೇಲೆ ಮೋಹವಿಲ್ಲವೆಂದೂ, ಬ್ರಿಟಿಷರು ಕೊಡಗನ್ನು ಆಕ್ರಮಿಸದಂತೆ ನೋಡಿಕೊಳ್ಳುವುದು ತನ್ನ ಉದ್ದೇಶವೆಂದೂ ನಿಜ ಹೇಳಿದ. ಕೆಲವು ದಿನಗಳ ನಂತರ ಅವನು ಯಾರಿಗೂ ತಿಳಿಯದಂತೆ ಉತ್ತರದ ಗಡಿಯನ್ನು ದಾಟಿ ಹೋದ.

ಚಿಕ್ಕ ವೀರರಾಜನ ಪದಚ್ಯುತಿಯ ನಂತರ ಮತ್ತೆ ಕೊಡಗಿನಲ್ಲಿ ಕಾಣಿಸಿಕೊಂಡು ತಾನು ಚಿಕ್ಕ ವೀರರಾಜನ ದೊಡ್ಡಪ್ಪನಾದ ಅಪ್ಪಾಜಿ ಅರಸನ ಹಿರಿಮಗ ವೀರರಾಜ ಅರಸನೆಂದೂ, ಕೊಡಗಿನ ಸಿಂಹಾಸನಕ್ಕೆ ತಾನು ಉತ್ತರಾಧಿಕಾರಿ ಎಂದೂ ಸಾರತೊಡಗಿದ. ಇದರಿಂದ ರಾಜಮನೆತನಕ್ಕೆ ನಿಷ್ಠೆಯಿಂದಿದ್ದ ಜನರ ಬೆಂಬಲ ಅವನಿಗೆ ದೊರಕಿತು. ಅವನು ಕೊಡಗಿಗೆ ಬಂದಾಗ ಚಿಕ್ಕವೀರರಾಜನ ದೊಡ್ಡಪ್ಪ ಅಪ್ಪಾಜಿ ರಾಜನ ಇಬ್ಬರು ಮಕ್ಕಳು ಕಾಣೆಯಾಗಿದ್ದರು. ಅವರಿಬ್ಬರನ್ನು ಚಿಕ್ಕವೀರರಾಜನ ದಿವಾನ ಕುಂಟ ಬಸವ



ಕೊಂದುಹಾಕಿದ್ದ. ಆದರೆ ಅದು ಜನಜನಿತವಾಗದೆ ಗುಪ್ತವಾಗಿಯೇ ಇತ್ತು. ಹಾಗಾಗಿ ಅಪರಂಪಾರ ತಾನು ಅಪ್ಪಾಜಿ ರಾಜನ ಹಿರಿಯ ಮಗ ವೀರರಾಜನೆಂದು ಹೇಳಿಕೊಂಡು ಜನರಿಂದ ಗೌರವಾದರ ಪಡಕೊಳ್ಳುತ್ತಿದ್ದ. ಆಗ ಅಪರಂಪಾರ ಕೊಡಗಿನ ರಾಜರು ಧರಿಸುತ್ತಿದ್ದ ಕೊಂಬು ಟೊಪ್ಪಿಯ ಹಾಗಿದ್ದ ಟೊಪ್ಪಿಯನ್ನು ಧರಿಸಿ, ರಾಜರು ತೊಡುತ್ತಿದ್ದ ಚಿಹ್ನೆಗಳನ್ನು ಧರಿಸುತ್ತಿದ್ದ. ಆ ಸಂದರ್ಭದಲ್ಲಿ ಸ್ವತಃ ಅಪರಂಪಾರನೇ ಸದ್ಯದಲ್ಲೆ ಕೊಡಗಿನಲ್ಲಿ ಒಂದು ದಂಗೆಯು ಸಂಭವಿಸಲಿದೆ, ತನ್ನ ಜೊತೆ ಸೇರಿದವರಿಗೆ ಬಹುಶಃ ಶಿಕ್ಷೆಯಾಗಬಹುದು ಎಂಬ ಎಚ್ಚರಿಕೆಯನ್ನು ತನ್ನ ಬೆಂಬಲಿಗರಿಗೆ ನೀಡಿದ್ದ. ಆದರೂ ಅವನ ಬೆಂಬಲಿಗರು ಅವನನ್ನು ತೊರೆಯಲಿಲ್ಲ. ಅಲ್ಲಿನ ಜನರು ಅವನನ್ನು ಅಪ್ಪಾಜಿ ಅರಸನ ಮಗನೆಂದು ನಂಬಿ ತುಂಬ ಆದರದಿಂದ ಸತ್ಕರಿಸಿದರು. ಅವರು ಕೊಡಗಿನಲ್ಲಿ ಈಗಾಗಲೇ ಬ್ರಿಟಿಷರ ಆಡಳಿತ ಭದ್ರವಾಗಿದ್ದು ಜನರು ಬ್ರಿಟಿಷರನ್ನು ಎದುರಿಸಿ ಹಿಂದಿನ ರಾಜವಂಶದವರನ್ನು ಸಿಂಹಾಸನಕ್ಕೇರಿಸುವುದು ಕಷ್ಟವೆಂದು ಅಪರಂಪಾರನಿಗೆ ತಿಳಿಸಿದರು. ಅವರ ಮಾತಿನ ಸತ್ಯತೆಯನ್ನು ಅರಿತ ಅಪರಂಪಾರ ತನ್ನ ದಿಕ್ಕನ್ನು ಬದಲಿಸಿ ಮಡಿಕೇರಿಯ ಕಡೆಗೆ ಹೋಗದೆ ಉತ್ತರ ಕೊಡಗಿನ ಮೂಲಕ ಸುಬ್ರಹ್ಮಣ್ಯಕ್ಕೆ ಬರುತ್ತಾನೆ.

೧೮೩೪ರಲ್ಲಿ ಕೊಡಗು ಬ್ರಿಟಿಷರ ಕೈವಶ ಆದಮೇಲೆ ಕೊಡಗಿಗೆ ಸೂಪರ್‌ಇನ್‌ಟೆಂಡೆಂಟ್ ಎಂಬ ಅಧಿಕಾರಿಯ ನೇಮಕವಾಯಿತು. ಲೀ ಹಾರ್ಡಿಯು ಸೂಪರ್‌ಇನ್‌ಟೆಂಡೆಂಟ್ ಆಗಿ ಬಂದವನು. ಲೀ ಹಾರ್ಡಿಯು ಮೈಸೂರಿನ ಕಮಿಶನರ್ ಅವರ ಅಧೀನ ಸಿಬ್ಬಂದಿಯಾಗಿದ್ದನು. ಕಂಪನಿ ಸರಕಾರವು ಮಾಡಿದ ಇತರ ಪ್ರಾಂತ್ಯಗಳಿಗಿರುವ ಶಾಸನವು ಕೊಡಗಿಗೆ ಅನ್ವಯವಾಗಬೇಕಾಗಿರಲಿಲ್ಲ. ಅಪರಂಪಾರ ಕೊಡಗನ್ನು ಪ್ರವೇಶಿಸಿದ ಕೂಡಲೇ ಲೀ ಹಾರ್ಡಿಯು ಅಪರಂಪಾರನ ಮೇಲೆ ಯಾವ ಕ್ರಮ ಜರುಗಿಸಬೇಕೆಂದು ದಿವಾನರ ಸಲಹೆಯನ್ನು ಕೇಳಿದ. ದಿವಾನರು ಅಪರಂಪಾರನಿಗೆ ಕೊಡಗಿನಲ್ಲಿ ಬೆಂಬಲವಿಲ್ಲವೆಂದೂ, ಅವನನ್ನು ನಿರ್ಲಕ್ಷಿಸಿದರೆ ಎಲ್ಲವೂ ಸರಿಹೋಗುತ್ತದೆ ಎಂದೂ ಹೇಳಿದರು. ಆದರೂ ಲೀ ಹಾರ್ಡಿಯು ಅಪರಂಪಾರನ ಮೇಲೆ ಕಣ್ಣಿಡಲು ಜನರನ್ನು ಬಿಟ್ಟನು.

ಸುಬ್ರಹ್ಮಣ್ಯ ಸಮೀಪದ ಕೂಜುಗೋಡು ಕಟ್ಟೆಮನೆ ಪಟೇಲ ಅಪ್ಪಯ್ಯ ಗೌಡನು ಅಪರಂಪಾರನಿಗೆ ಆಶ್ರಯ ಕೊಡುತ್ತಾನೆ. ಕೊಡಗಿನಿಂದ ಗಾಳಿಬೀಡಿಗಾಗಿ

ಕಲ್ಮಕಾರು ದಾಟಿ ಬಂದರೆ ದಾರಿಯಲ್ಲಿ ಕೂಜುಗೋಡು ಸಿಗುತ್ತದೆ. ಕೂಜುಗೋಡು ತನ್ನ ಉದ್ದೇಶ ಸಾಧನೆಗೆ ಪ್ರಶಸ್ತ ಸ್ಥಳವೆಂದು ಅಪರಂಪಾರ ತಿಳಿದ. ಕೊಡಗಿನಲ್ಲಿ ಬ್ರಿಟಿಷರು ಅದಾಗಲೇ ಮತಾಂತರ ಪ್ರಕ್ರಿಯೆ ಆರಂಭಿಸಿದ್ದಾರೆಂದೂ, ಅವರು ಅಮರಸುಳ್ಯ ಸೀಮೆಯವರನ್ನು ಮತಾಂತರಿಸಲಿದ್ದಾರೆಂದೂ ಅಪರಂಪಾರ ಅಪ್ಪಯ್ಯಗೌಡನನ್ನು ಎಚ್ಚರಿಸಿದ. ಜಂಗಮನ ವೇಷ ತೊಟ್ಟು ಜನರನ್ನು ಆಕರ್ಷಿಸಿದ. ಅನೇಕ ಪವಾಡಗಳನ್ನು ಮಾಡಿ ಜನರ ಮೇಲೆ ಪ್ರಭಾವ ಬೀರಿದ. ಈ ಸಂದರ್ಭದಲ್ಲಿ ಅಪರಂಪಾರ ಪುತ್ತೂರಿನ ಸುಬೇದಾರ ಅಚ್ಚು ಎಂಬವನ ದೇಹದ ದೊಡ್ಡ ಗಾಯವನ್ನು ಗುಣಪಡಿಸಿದ. ಈ ಉಪಕಾರಕ್ಕೆ ಪ್ರತಿಯಾಗಿ ಸುಬೇದಾರ ಅವನಿಗೆ ಕುದುರೆ ಮತ್ತು ಇತರೇ ಕಾಣಿಕೆಗಳನ್ನು ನೀಡಿದ.

ಹುಲಿ ಕಡಿದ ನಂಜಯ್ಯ ಅಪರಂಪಾರನ ಸಹಚರ. ಅವರಿಬ್ಬರೂ ಸೇರಿ ಜನರನ್ನು ಬ್ರಿಟಿಷರ ವಿರುದ್ಧ ಎತ್ತಿ ಕಟ್ಟಿದರು. ಕೊಡಗಿನಲ್ಲಿ ರಾಜಮನೆತನದ ಆಡಳಿತವನ್ನು ಪುನರ್ ಪ್ರತಿಷ್ಠಾಪಿಸುವುದೇ ಮುಖ್ಯ ಕಾರ್ಯವೆಂದು ಜನರ ಮನದಲ್ಲಿ ಬಿಂಬಿಸಿದರು. ಆದರೆ ಅವರ ಮುಖ್ಯ ಗುರಿ ಬ್ರಿಟಿಷ್ ಸರಕಾರವನ್ನು ಕೊನೆಗಾಣಿಸುವುದೇ ಆಗಿತ್ತು. ತಮ್ಮ ಉದ್ದೇಶ ಸಾಧನೆಗಾಗಿ ಇಬ್ಬರೂ ಜೊತೆಯಾಗಿ ಮತ್ತು ಪ್ರತ್ಯೇಕವಾಗಿ ಗ್ವಾಲಿಯರ್, ಲಾಹೋರ್, ಪೇಶಾವರ, ಹೈದರಾಬಾದ್, ಮೈಸೂರು ಹೀಗೆ ದೇಶದ ಹಲವು ಭಾಗಗಳನ್ನು ಸುತ್ತಿದರು ಎಂದು ಹೇಳಲಾಗಿದೆ. ಅವರು ಯಾರನ್ನೆಲ್ಲ ಕಂಡಿದ್ದಾರೆ, ಏನೆಲ್ಲ ಕಾರ್ಯಾಚರಣೆಗಳನ್ನು ನಡೆಸಿದ್ದಾರೆ ಎನ್ನುವುದು ಸ್ಪಷ್ಟವಿಲ್ಲ.

ರಣವ್ಯೂಹ ಪರಿಣತ ಹುಲಿ ಕಡಿದ ನಂಜಯ್ಯ ಏಳು ಸಾವಿರ ಸೀಮೆ(ಶನಿವಾರಸಂತೆ, ಕೊಡಲಿಪೇಟೆಯ ಭಾಗ)ಯ ಒಬ್ಬ ಅಕ್ಕಿ ವ್ಯಾಪಾರಿ ಎಂದು ಹೇಳಲಾಗುತ್ತದೆ. ಮಡಿಕೇರಿಯ ಅರಮನೆ ನಿರ್ಮಾಣದ ವೇಳೆ ಅಕ್ಕಿಯನ್ನು ಸರಬರಾಜು ಮಾಡುತ್ತಿದ್ದ. ಅವನು ಒಮ್ಮೆ ಶನಿವಾರಸಂತೆ ಪಕ್ಕದ ಕಾಡಲ್ಲಿ ಸಂಚರಿಸುತ್ತಿದ್ದಾಗ ಹುಲಿಯೊಂದು ಅವನ ಮೇಲೆ ಹಾರಿತು. ಅದನ್ನು ತನ್ನ ಕತ್ತಿಯಿಂದ ಕಡಿದು ಓಡಿಸಿ ಬಿಟ್ಟ. ಅಂದಿನಿಂದ ಅವನು ಹುಲಿ ಕಡಿದ ನಂಜಯ್ಯನಾದ. ಅವನು ಒಬ್ಬ ಜಂಗಮನಾಗಿದ್ದನು.

ಅಪರಂಪಾರನಿಗೆ ಕಟ್ಟೆಮನೆ ಅಪ್ಪಯ್ಯಗೌಡನ ಮೂಲಕ ಸುಳ್ಯ ಪರಿಸರದ ರೈತರ ಜೊತೆ ಸಂಪರ್ಕ ಸಾಧಿಸಲು ಸಾಧ್ಯವಾಯಿತು. ಅಪ್ಪಯ್ಯಗೌಡನು ಸಹೋದರ ಮಲ್ಲಪ್ಪಗೌಡನ ನೆರವಿನಿಂದ ಬ್ರಿಟಿಷರ ವಿರುದ್ಧ ಜನರನ್ನು ಒಂದುಗೂಡಿಸಲು ಅಪರಂಪಾರನಿಗೆ ನೆರವಾದ.

ಇದೇ ಸಮಯದಲ್ಲಿ ಸುಳ್ಯ ಪರಿಸರದಲ್ಲಿ ಹೆಸರುವಾಸಿಯಾಗಿದ್ದ ರೈತ ಕೆದಂಬಾಡಿ ರಾಮಗೌಡನು ಅಪರಂಪಾರನ ಪರವಾಗಿ ಜನಸಂಘಟನೆಯಲ್ಲಿ ತೊಡಗಿದ್ದ. ಅದಾಗಲೇ ಬ್ರಿಟಿಷರ ಕ್ರೂರವಾದ ಕಂದಾಯ ಶಾಸನ ಅಮರಸುಳ್ಯ ಸೀಮೆಯಲ್ಲಿ ಜಾರಿಗೊಂಡಿತ್ತು. ಅವನು ಬ್ರಿಟಿಷರ ಕಂದಾಯ ವ್ಯವಸ್ಥೆಯಿಂದ ತೊಂದರೆಗೊಳಗಾದ ರೈತರನ್ನೆಲ್ಲ ಒಗ್ಗೂಡಿಸಿದ. ಬ್ರಿಟಿಷರನ್ನು ಕೆನರಾ ಜಿಲ್ಲೆಯಿಂದ ಓಡಿಸುವುದು ಅವನ ಗುರಿಯಾಗಿತ್ತು.

೧೮೩೬–೩೭ರ ವೇಳೆಗೆ ಅಪರಂಪಾರ ಪ್ರಬಲನಾದ. ಈ ನಡುವೆ ಅಪರಂಪಾರನ ಆಶಯದಂತೆ ಪಟೇಲ ಅಪ್ಪಯ್ಯಗೌಡ ಇನ್ನೂರು ಜನ ರೈತರ ಪುಟ್ಟ ದಂಡೊಂದನ್ನು ೧೮೩೬ರಲ್ಲಿ ಕಟ್ಟಿದ. ಈ ವಿಷಯ ಕೊಡಗಿನ ಆಡಳಿತಾಧಿಕಾರಿ ಲೀ ಹಾರ್ಡಿಗೆ ತಿಳಿದಾಗ ಅವನು ಬೋಪು ದಿವಾನನ ನೇತೃತ್ವದಲ್ಲಿ ಸೇನೆಯ ಒಂದು ತುಕಡಿಯನ್ನು ಕೂಜುಗೋಡಿಗೆ ಕಳುಹಿಸಿಕೊಟ್ಟ. ಪಟೇಲ ಅಪ್ಪಯ್ಯಗೌಡನ ಪುಟ್ಟ ದಂಡು ಪಲಾಯನ ಮಾಡಿತು. ಅಪರಂಪಾರ ಮಂಜರಾಬಾದ್ ಕೋಟೆಯಲ್ಲಿ ಸೆರೆ ಸಿಕ್ಕ. ನಂತರ ಅವನನ್ನು ಬ್ರಿಟಿಷರು ತಿರುಚಿನಾಪಳ್ಳಿಯ ಜೈಲಿಗೆ ಕೊಂಡೊಯ್ದು ರಾಜಕೀಯ ಖೈದಿಯಾಗಿ ಇರಿಸಿದರು. ಸುಮಾರು ೩೪ ವರ್ಷಗಳ ಸೆರೆವಾಸದ ನಂತರ ತನ್ನ ವೃದ್ಧಾಪ್ಯದಲ್ಲಿ ಅಪರಂಪಾರ ಜೈಲಿನಿಂದ ಬಿಡುಗಡೆಯಾಗಿ ಬೆಂಗಳೂರಿಗೆ ಬಂದ. ಸರಕಾರದವರು ಅವನನ್ನು ಮೈಸೂರಿನಲ್ಲಿ ಇರಲು ಕಳುಹಿಸಿದರು. ಆದರೆ ಅವನು ದಾರಿಯಲ್ಲಿ ಶ್ರೀರಂಗಪಟ್ಟಣದಲ್ಲಿ ೧೮೭೦ರಲ್ಲಿ ಮೃತನಾದ.

ಆಂಗ್ಲರ ವಿರುದ್ಧ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡವರನ್ನು ಮಾತ್ರವಲ್ಲ, ಅವರ ಮೇಲೆ ಸಂಚು ಹೂಡಲು ಯತ್ನಿಸಿದವರನ್ನು ಕೂಡ ಗಲ್ಲು ಶಿಕ್ಷೆಗೆ ಒಡ್ಡಲಾಗಿರುತ್ತದೆ. ೧೮೩೭ರ ಅಮರಸುಳ್ಯ ಹೋರಾಟವನ್ನು ಹುಟ್ಟುಹಾಕಿದ ಗುರುತರ ಆರೋಪವನ್ನು ಸ್ವಾಮಿ ಅಪರಂಪಾರನ ಮೇಲೆ ಹೊರಿಸಲಾಗಿದೆ. ಆದರೆ ಕುತೂಹಲಕಾರಿ ಅಂಶವೆಂದರೆ ಆತನನ್ನು ಬ್ರಿಟಿಷರು ಗಲ್ಲು ಶಿಕ್ಷೆಗೆ ಒಳಪಡಿಸುವುದಿಲ್ಲ. ಬದಲಾಗಿ ೧೮೩೫ರಲ್ಲಿ ಆತನನ್ನು ಸೆರೆಮನೆಗೆ ನೂಕಿದ

ಬ್ರಿಟಿಷರು ೧೮೬೮ರಲ್ಲಿ ಬಿಡುಗಡೆ ಮಾಡುತ್ತಾರೆ. ಅದಕ್ಕೆ ಕಾರಣವೇನು ಎನ್ನುವುದು ಕಲ್ಪನೆಗೂ ನಿಲುಕದಂತಾಗಿರುವ ವಿಷಯ. ಆದರೆ ಅಪರಂಪಾರ ಸೆರೆಯಾದ ತಕ್ಷಣ ದಂಗೆ ಕೊನೆಗೊಳ್ಳುವುದಿಲ್ಲ. ಅಪರಂಪಾರ ಅವನ ಆಪ್ತ ಸಹಾಯಕನಾದ ಕಲ್ಯಾಣಪ್ಪ (ಕಲ್ಯಾಣಸ್ವಾಮಿ) ನಂತರ ತಾನು ಅಪ್ಪಾಜಿ ಅರಸನ ಎರಡನೆಯ ಮಗ ನಂಜುಂಡ ಅರಸನಾಗಿದ್ದು ಕೊಡಗಿನ ಸಿಂಹಾಸನಕ್ಕೆ ಉತ್ತರಾಧಿಕಾರಿ ಎಂದು ಘೋಷಿಸಿಕೊಂಡು ಬರುತ್ತಾನೆ. ಆಗಲೂ ಬಂಡಾಯವು ಕಲ್ಯಾಣಸ್ವಾಮಿಗೆ ಕೊನೆಯಾಗುವುದಿಲ್ಲ. ಕಲ್ಯಾಣಸ್ವಾಮಿಯ ಬಂಧನವಾದ ಮೇಲೆ ಮತ್ತೊಬ್ಬ ಕಲ್ಯಾಣಸ್ವಾಮಿ ಬರುತ್ತಾನೆ.

ಒಂದೊಮ್ಮೆ ಸ್ವಾಮಿ ಅಪರಂಪಾರ ಅಪ್ಪಾಜಿ ಅರಸನ ಮಗನೇ ಆಗಿರುತ್ತಿದ್ದರೆ ಹೋರಾಟದ ಅವಶ್ಯಕತೆ ಇರಲಿಲ್ಲ. ೨೩ ಜೂನ್ ೧೮೩೫ರಂದು ಲಂಡನ್‌ನ ಕೋರ್ಟ್ ಆಫ್ ಡೈರೆಕ್ಟರ್ಸ್ ಕರ್ನಲ್ ಫ್ರೇಸರ್‌ಗೆ ಪತ್ರ ಬರೆದು ಹಿಂದಿನ ರಾಜವಂಶದಲ್ಲಿ ಯಾರಾದರೂ ಸರಿಯಾದ ಹಕ್ಕುದಾರರಿದ್ದರೆ ಕೊಡಗಿನ ಸಿಂಹಾಸನವನ್ನು ಅವರಿಗೆ ಕೊಡಿ ಎಂದೇ ಸೂಚಿಸಿತ್ತು. ಅಪರಂಪಾರ ಅಪ್ಪಾಜಿ ಅರಸನ ಮಗ ವೀರರಾಜ ಅರಸನಾಗಿದ್ದರೆ ಕೊಡಗಿನ ಸಿಂಹಾಸನದ ಅಧಿಕೃತ ಉತ್ತರಾಧಿಕಾರಿಯೇ ಹೌದು. ಹಾಗಿದ್ದರೂ ನೇರವಾಗಿ ಬ್ರಿಟಿಷರ ಬಳಿ ಹೋಗಿ ಸಿಂಹಾಸನಕ್ಕೆ ತನ್ನ ಹಕ್ಕನ್ನು ಕೇಳಲಿಲ್ಲವೆಂದರೆ ಅಪರಂಪಾರ ನಿಜವಾಗಿ ಅಪ್ಪಾಜಿ ಅರಸನ ಮಗನಾಗಿರಲು ಸಾಧ್ಯವಿಲ್ಲ. ಜನತಾ ನಾಯಕನಾಗಿಯೇ ಅಪರಂಪಾರ ಕಾಣಿಸಿಕೊಳ್ಳುತ್ತಾನೆ. ಸಂಘಟನೆಯು ಸಾಮಾನ್ಯ ಜನರಿಂದ ರೂಪುಗೊಂಡಿತ್ತು ಎನ್ನುವುದು ಈ ಹೋರಾಟದ ಮಹತ್ವವನ್ನು ಹೇಳುತ್ತದೆ.

**ಕಲ್ಯಾಣಸ್ವಾಮಿ**

ಕಲ್ಯಾಣಪ್ಪ ಅಪರಂಪಾರನ ಅನುಯಾಯಿ. ಅವನು ಜಂಗಮವೇಷಧಾರಿಯಾಗಿದ್ದುದರಿಂದ ಕಲ್ಯಾಣಸ್ವಾಮಿ ಎಂದು ಕರೆಸಿಕೊಂಡಿದ್ದನು. ಅಪರಂಪಾರ ಬ್ರಿಟಿಷರ ಬಂಧನಕ್ಕೆ ಒಳಗಾದ ಬಳಿಕ ಈ ಕಲ್ಯಾಣಸ್ವಾಮಿಯು ತಾನು ಅಪ್ಪಾಜಿ ರಾಜನ ಎರಡನೆಯ ಮಗ ನಂಜುಂಡ ರಾಜನಾಗಿದ್ದು, ಕೊಡಗಿನ ಪಟ್ಟದ ಹಕ್ಕುದಾರ ಎಂದು ಸಾರತೊಡಗಿದ.

ಕೊಡಗಿನಲ್ಲಿ ಜನರು ಕಲ್ಯಾಣಸ್ವಾಮಿಯನ್ನು ತಮ್ಮ ರಾಜವಂಶದವನೆಂದು ಭಾವಿಸಿ ಗುಟ್ಟಾಗಿ ಇರಿಸಿ ಸತ್ಕಾರ ಮಾಡಿದರು. ಅಪ್ಪಾಜಿ ರಾಜನ ಯಾವ ಮಕ್ಕಳೂ ಜೀವಂತವಾಗಿಲ್ಲ ಎಂದು ಲೀ ಹಾರ್ಡಿಗೆ ದಿವಾನ್ ಚೆಪ್ಪುಡೀರ ಪೊನ್ನಪ್ಪ ಹೇಳಿದ್ದ, ವೀರರಾಜ ಅರಸ ಮತ್ತು ನಂಜುಂಡ ಅರಸರ ಶವಗಳನ್ನು ಹೂತು ಹಾಕಿದ ಭಟರನ್ನು ಕರೆಸಿ ಸಾಕ್ಷಿ ಕೊಡಿಸಿದ್ದ. ಆದ್ದರಿಂದ ಕೊಡಗಿನ ಬ್ರಿಟಿಷ್ ಆಡಳಿತವು ಬಹುಮಟ್ಟಿಗೆ ಕಲ್ಯಾಣಸ್ವಾಮಿಯನ್ನು ವಂಚಕ ಎಂದು ತೀರ್ಮಾನಿಸಿತು. ಕಲ್ಯಾಣಸ್ವಾಮಿಯ ಬೆಂಬಲಿಗರಲ್ಲಿ ಹಲವು ನಾಯಕರಿದ್ದರು. ಹುಲಿ ಕಡಿದ ನಂಜಯ್ಯ, ಸುಬೇದಾರ ಗುಡ್ಡೆಮನೆ ಅಪ್ಪಯ್ಯ ಗೌಡ, ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಬೀರಣ್ಣ ಬಂಟ, ಕುಂಬಳೆಯ ಸುಬ್ರಾಯ, ಮುಮ್ಮಿಡ ರಂಗಪ್ಪ ಮೊದಲಾದವರು ಬೆಂಬಲಿಗರಾಗಿದ್ದರು. ಕಲ್ಯಾಣಸ್ವಾಮಿಯ ಬೆಂಬಲಿಗರು ಕೊಡಗಿನಲ್ಲಿ ಹಾಲೇರಿ ರಾಜಮನೆತನಕ್ಕೆ ನಿಷ್ಠರಾಗಿರುವವರನ್ನು ಹುಡುಕುತ್ತಾ ಆ ವಲಯದಲ್ಲಿ ಅಪ್ಪಾಜಿ ಅರಸರ ಎರಡನೆಯ ಮಗ ನಂಜುಂಡ ರಾಜನು ಕೊಡಗನ್ನು ಪ್ರವೇಶಿಸಲಿದ್ದಾನೆ, ಈ ಸಮಯದಲ್ಲಿ ಜನರು ಶಸ್ತ್ರಧಾರಿಗಳಾಗಿ ನಂಜುಂಡ ರಾಜನ ಸಹಾಯಕ್ಕೆ ಬರಬೇಕೆಂದೂ ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕಬೇಕೆಂದೂ ಪ್ರಚಾರ ಮಾಡತೊಡಗಿದರು. ಅದೇ ವೇಳೆಗೆ ಸರಿಯಾಗಿ ಈಗಿನ ದಕ್ಷಿಣ ಕನ್ನಡದ ಅಮರಸುಳ್ಯ ಮತ್ತು ಬೆಳ್ಳಾರೆಗಳಲ್ಲಿ ಜನ ದಂಗೆ ಏಳಲು ಯೋಜನೆಯನ್ನು ರೂಪಿಸಲಾಗಿದೆ ಎಂದು ಸಾರಲಾಯಿತು. ಸಾಕಷ್ಟು ಗುಟ್ಟಾಗಿಯೇ ಈ ಪ್ರಚಾರ ನಡೆಯಿತು.

ಕೊಡಗಿನಲ್ಲಿ ಬ್ರಿಟಿಷ್ ಆಡಳಿತ ಬಂದ ಮೇಲೆ ಚಿಕ್ಕವೀರ ರಾಜನ ನಾಲ್ವರು ದಿವಾನರಲ್ಲಿ ಕುಂಟ ಬಸವ ಆತ್ಮಹತ್ಯೆ ಮಾಡಿಕೊಂಡಿದ್ದನು. ಲಕ್ಷ್ಮೀನಾರಾಯಣ, ಬೋಪು, ಪೊನ್ನಪ್ಪ ಮೂವರೂ ದಿವಾನರಾಗಿ ಮುಂದುವರಿದಿದ್ದರು. ಪೊನ್ನಪ್ಪ ಮತ್ತು ಬೋಪು ಅವರು ಕುಶಾಲನಗರಕ್ಕೆ ಹೋಗಿ ಬ್ರಿಟಿಷರನ್ನು ಕರೆತರುವುದರಲ್ಲಿ ಪ್ರಮುಖರಾಗಿದ್ದುದರಿಂದ ಸ್ವಾಭಾವಿಕವಾಗಿ ಬ್ರಿಟಿಷ್ ಆಡಳಿತದಲ್ಲಿ ಅವರಿಗೆ ಪ್ರಾಮುಖ್ಯತೆ ಬಂದಿತ್ತು. ಇದರಿಂದ ದಿವಾನ ಲಕ್ಷ್ಮೀನಾರಾಯಣನಿಗೆ ತನ್ನ ಮಾತಿಗೆ ಬೆಲೆ ಇಲ್ಲ ಎನಿಸಿ ಕಳೆದು ಹೋದ ಮಹತ್ವವನ್ನು ಮರಳಿ ತರಲು ಹೊರಟನು.

ಅಪರಂಪಾರನ ಬಂಧನದ ಕೆಲವು ತಿಂಗಳುಗಳ ನಂತರ 'ಅಪ್ಪಾಜಿ ಅರಸನ ಎರಡನೆಯ ಮಗ ನಂಜುಂಡರಸ ಮತ್ತು ನಂಜುಂಡರಸನ ಆಪ್ತನೊಬ್ಬ ಮಡಿಕೇರಿಯ ಉತ್ತರದ ಭಾಗಕ್ಕೆ ಬಂದಿದ್ದಾನೆ. ಅಲ್ಲಿನ ಜನರು ಅವನಿಗೆ

ನೆರವು ನೀಡಲು ಒಪ್ಪಿದ್ದಾರೆ. ದಿವಾನ ಪೊನ್ನಪ್ಪ ಮತ್ತು ದಿವಾನ ಬೋಪು ಅವರಿಗೆ ಈ ವಿಷಯ ತಿಳಿದಿದೆ. ತನಗೆ ಈ ಸುದ್ದಿಯನ್ನು ಮಲ್ಲ ಎಂಬ ಗೂಢಾಚಾರನು ತಿಳಿಸಿದ್ದಾನೆ' ಎಂದು ಲಕ್ಷ್ಮೀನಾರಾಯಣ ಕ್ಯಾಪ್ಟನ್ ಲೀ ಹಾರ್ಡಿಗೆ ತಿಳಿಸಿದನು. ಈ ಸುದ್ದಿಯನ್ನು ಲೀ ಹಾರ್ಡಿಗೆ ತಿಳಿಸುವಾಗ ದಿವಾನ ಬೋಪು ಮತ್ತು ದಿವಾನ ಪೊನ್ನಪ್ಪ ಇಬ್ಬರೂ ಮಡಿಕೇರಿಯಲ್ಲಿ ಇರಲಿಲ್ಲ. ದಿವಾನ ಲಕ್ಷ್ಮೀನಾರಾಯಣ ತನಗೆ ಸುದ್ದಿ ಕೊಟ್ಟ ಮಲ್ಲ ಎಂಬವನನ್ನು ಲೀ ಹಾರ್ಡಿಯ ಬಳಿಗೆ ಕಳುಹಿಸದೆ ಊರಿಗೆ ಕಳಿಸಿಬಿಟ್ಟನು. ಅಲ್ಲದೆ ಕೆಳಕೊಡಗಿನ ಭಾಗದಲ್ಲಿ ಬ್ರಿಟಿಷರ ಮೇಲೆ ಅಸಮಾಧಾನ ಉಂಟಾಗಿದೆ ಎಂದು ಕೆಳಕೊಡಗಿನಿಂದ ಬಂದ ಹರಿಕಾರ ಯೆಂಕಪ್ಪ ತಂದ ಸುದ್ದಿಯನ್ನು ಲಕ್ಷ್ಮೀನಾರಾಯಣ ಲೀ ಹಾರ್ಡಿಗೆ ತಿಳಿಸಲಿಲ್ಲ. ಆದರೆ ಈ ವಿಚಾರ ಲೀ ಹಾರ್ಡಿಗೆ ತಿಳಿಯಿತು. ಲೀ ಹಾರ್ಡಿ ಇದೆಲ್ಲವನ್ನೂ ಒಟ್ಟಾಗಿ ವಿಮರ್ಶೆ ಮಾಡಿದಾಗ ಲಕ್ಷ್ಮೀನಾರಾಯಣ ಹೇಳಿದ್ದು ಸುಳ್ಳೆಂದೂ, ಬೋಪು ದಿವಾನ ಮತ್ತು ಪೊನ್ನಪ್ಪ ದಿವಾನರ ಮೇಲೆ ತನಗೆ ಅವಿಶ್ವಾಸ ಉಂಟಾಗಲು ಹೇಳಿದ್ದೆಂದೂ ಅರ್ಥವಾಯಿತು.

ಲಕ್ಷ್ಮೀನಾರಾಯಣನ ಪ್ರಯತ್ನವು ಅವನಿಗೇ ತಿರುಗುಬಾಣವಾಯಿತು. ಲಕ್ಷ್ಮೀನಾರಾಯಣನ ತಮ್ಮ ರಾಮಪ್ಪಯ್ಯ ಸುಳ್ಯದಲ್ಲಿ ಅಮಲ್ದಾರರಾಗಿದ್ದರು. ರಾಮಪ್ಪಯ್ಯ ಲಕ್ಷ್ಮೀನಾರಾಯಣನಿಗೆ ಬರೆಯುವ ಪತ್ರಗಳನ್ನು ಅಂದಾಜಿಸಿದ ಲೀ ಹಾರ್ಡಿ, ಕಲ್ಯಾಣಸ್ವಾಮಿಯ ಒಳಸಂಚಿನ ಬಗ್ಗೆ ಲಕ್ಷ್ಮೀನಾರಾಯಣನಿಗೆ ತಿಳಿದಿರಬೇಕು ಎಂದು ಭಾವಿಸಿ ಲಕ್ಷ್ಮೀನಾರಾಯಣನನ್ನು ತಾತ್ಕಾಲಿಕವಾಗಿ ದಿವಾನ ಹುದ್ದೆಯಿಂದ ತೆಗೆದುಹಾಕಿ ವಿಚಾರಣೆಗೆ ಆದೇಶಿಸಿದನು. ಲಕ್ಷ್ಮೀನಾರಾಯಣನು ಹೇಳಿದ ಹಾಗೆ ಕೊಡಗಿನಲ್ಲಿ ದಂಗೆಯುಂಟಾಗಲಿಲ್ಲ. ಬೋಪು ಮತ್ತು ಪೊನ್ನಪ್ಪ ದಿವಾನರುಗಳು ಕೊಡಗಿನವರು ದಂಗೆ ಮಾಡುವುದಿಲ್ಲ, ಇದೆಲ್ಲ ಲಕ್ಷ್ಮೀನಾರಾಯಣ ಹೇಳಿದ ಸುಳ್ಳು ಎಂದು ಲೀ ಹಾರ್ಡಿಗೆ ಮನವರಿಕೆ ಮಾಡಿದರು. ನಂತರ ಲಕ್ಷ್ಮೀನಾರಾಯಣನ ವಿಚಾರಣೆಯಲ್ಲಿ ಅವನ ಮೇಲಿನ ಆರೋಪಕ್ಕೆ ಸಾಕ್ಷಿ ಇಲ್ಲವೆಂದು ತೀರ್ಮಾನವಾಯಿತು. ಆದರೆ ಹೋರಾಟದ ವಿಷಯದಲ್ಲಿ ಲಕ್ಷ್ಮೀನಾರಾಯಣ ಹೋರಾಟಗಾರನ ಪರವಾಗಿದ್ದನೋ, ಬ್ರಿಟಿಷರ ಪರವಾಗಿದ್ದನೋ, ತಟಸ್ಥನಾಗಿದ್ದನೋ ಎಂಬುದು ಇಂದಿಗೂ ಖಚಿತವಾಗಿಲ್ಲ. ಲಕ್ಷ್ಮೀನಾರಾಯಣನ ಪತ್ನಿಯ ಸಹೋದರ, ಲಕ್ಷ್ಮೀನಾರಾಯಣನ ಮಾತನ್ನು ಪಾಲಿಸುವ ಸುಬೇದಾರ ಕೃಷ್ಣ ಹಾಗೂ ಲಕ್ಷ್ಮೀನಾರಾಯಣನ ಅಳಿಯ ಕರಣಿಕ ಸುಬ್ಬಯ್ಯ ಹೋರಾಟಗಾರರಾಗಿದ್ದರು.



ಕಲ್ಯಾಣಸ್ವಾಮಿಗೆ ಕೊಡಗಿನಲ್ಲಿ ಜನರ ಬೆಂಬಲ ಇದ್ದರೂ ಅವನು ಸ್ವತಂತ್ರವಾಗಿ ಓಡಾಡುವುದು ಅಪಾಯಕಾರಿಯಾಗಿತ್ತು. ಎಲ್ಲೆಡೆ ಬ್ರಿಟಿಷರ ಕಣ್ಗಾವಲು ಇತ್ತು. ಅದರಿಂದ ತಪ್ಪಿಸಿಕೊಂಡು ಕಾರ್ಯಾಚರಣೆ ಮಾಡುವುದು ಅಸಾಧ್ಯವೆನ್ನುವ ಸ್ಥಿತಿ ಇತ್ತು. ಈ ಕಾರಣಗಳಿಂದ ಅವನು ದಕ್ಷಿಣ ಕನ್ನಡಕ್ಕೆ ಬಂದು ಹೋರಾಟದ ಸಂಘಟನೆಯನ್ನು ಮಾಡಲು ಬಯಸಿದನು.

ಕಲ್ಯಾಣಸ್ವಾಮಿಯು ಕೊಡಗಿನಿಂದ ತಪ್ಪಿಸಿಕೊಂಡು ಹೋದ ವಿಚಾರವು ಲೀ ಹಾರ್ಡಿಗೆ ಗೊತ್ತಾಗಿ ಅವನನ್ನು ಬಂಧಿಸಲು ಸೈನಿಕರನ್ನು ಕಳಿಸಿದ. ಲೀ ಹಾರ್ಡಿಯ ಸೈನಿಕರು ಕಲ್ಯಾಣಸ್ವಾಮಿಯನ್ನು ಬೈತೂರಿನಲ್ಲಿ ಸೆರೆ ಹಿಡಿದರು. ಮುಂದೆ ಅವನನ್ನು ಗಲ್ಲಿಗೇರಿಸಲಾಯಿತು.

## ಹೋರಾಟದ ಮೂರನೇ ಹಂತ

ಬ್ರಿಟಿಷ್ ವಿರೋಧಿ ಹೋರಾಟದ ಎರಡು ಪ್ರಯತ್ನಗಳು ವಿಫಲಗೊಂಡವು. ಆದರೆ ಅಮರಸುಳ್ಯದ ಕಡೆಯ ನಾಯಕರು ಹೋರಾಟವನ್ನು ಕೈಬಿಡಲಿಲ್ಲ. ೧೮೩೭ರಲ್ಲಿ ನಡೆದ ಹೋರಾಟದ ಮೂರನೆಯ ಪ್ರಯತ್ನವೇ ಅತಿ ಪ್ರಧಾನವಾದ ಹೋರಾಟವಾಗಿದೆ.

ಹೋರಾಟದ ಬಿಸುಪು ಏರುತ್ತಾ ಹೋದುದಕ್ಕೆ ಕಾರಣ ಕಂಪೆನಿ ಸರಕಾರದ ತೆರಿಗೆ ನೀತಿ. ಸ್ವಾಮಿ ಅಪರಂಪಾರನು ಕಾಣಿಸಿಕೊಳ್ಳುವ ವೇಳೆಗೆ ರೈತರಿಗೆ ಅಸಮಾಧಾನವಾಗುವ ಕಂದಾಯ ಜಾರಿಯಾಗಿತ್ತಷ್ಟೆ. ಅದಾಗಿ ಮೂರು ವರ್ಷ ಕಳೆದಿತ್ತು. ಗೌಡರು ಮತ್ತು ಸ್ಥಳೀಯರು ಕಳೆದ ಮೂರು ವರ್ಷಗಳಿಂದ ನಾನಾ ಬಗೆಯ ಪ್ರಯತ್ನಗಳನ್ನು ಮಾಡಿ ಸರಕಾರವು ಕೇಳಿದ ಸುಂಕವನ್ನು ಕಟ್ಟಿದ್ದರು. ಅದಕ್ಕಾಗಿ ಅವರಲ್ಲಿದ್ದ ಸಂಪನ್ಮೂಲಗಳೆಲ್ಲವೂ ಮುಗಿದುಹೋಗಿದ್ದು ಕೊಡಲು ಇನ್ನೇನೂ ಉಳಿದಿರಲಿಲ್ಲ. ಅಂದರೆ ಮೂರು ವರ್ಷಗಳ ಕಾಲ ಕಷ್ಟಪಟ್ಟು ತೆರಿಗೆ ಕಟ್ಟಿ ಬೇರೆ ಏನೂ ಇಲ್ಲದೆ ಹೋದಾಗ ಕೂಡಿಟ್ಟ ರೈತರ ಸಿಟ್ಟು ಆಕ್ರೋಶವಾಗಿ ಪರಿವರ್ತನೆಯಾಯಿತು.

ಅಮರಸುಳ್ಯದಲ್ಲಿ ಹೋರಾಟ ನಡೆದಾಗ ಕೊಡಗಿನಲ್ಲಿಯೂ ಹೋರಾಟ ನಡೆದು ಬ್ರಿಟಿಷರನ್ನು ಹೊರಹಾಕಬಹುದೆಂಬ ಚಿಂತನೆಯು ಅಮರಸುಳ್ಯದ ಹೋರಾಟಗಾರರಲ್ಲಿತ್ತು. ಕಲ್ಯಾಣಸ್ವಾಮಿಯನ್ನು ಬಂಧಿಸಿದುದರಿಂದ ಈ

ಚಿಂತನೆಯು ಸಾಕಾರಗೊಳ್ಳಲು ಸಾಧ್ಯವಿರಲಿಲ್ಲ. ಆದರೆ ಕಲ್ಯಾಣಸ್ವಾಮಿಯ ಬಂಧನವಾಗಿ ಅವನಿಗೆ ಫಾಶಿ ಶಿಕ್ಷೆ ನೀಡಿದ ವಿಚಾರವು ಅಮರಸುಳ್ಯದ ಜನರಿಗೆ ಗೊತ್ತಾಗಲಿಲ್ಲ. ಅಪ್ಪಾಜಿ ರಾಜನ ಮಗ ಇಷ್ಟರಲ್ಲೆ ತಮ್ಮ ರಾಜನಾಗಲಿದ್ದಾನೆ ಎಂದು ಜನ ಭಾವಿಸಿದ್ದರು. ಜನರ ಈ ಭಾವನೆಯನ್ನು ಅದೇ ರೀತಿ ಉಳಿಸಬೇಕಾದರೆ ಯಾರಾದರೊಬ್ಬನನ್ನು ಇವನೇ ಕಲ್ಯಾಣಸ್ವಾಮಿ ಎಂದು ತೋರಿಸಬೇಕಾದ ಅಗತ್ಯ ಹೋರಾಟದ ನಾಯಕರಿಗಿತ್ತು. ರಾಜಮನೆತನದವರಲ್ಲದೆ ಇತರರಿಗೆ ನಾಯಕತ್ವ ಪಟ್ಟ ಕಟ್ಟಿದರೆ, ಜನಬೆಂಬಲ ಪಡೆಯುವುದು ಕಷ್ಟ ಎಂಬುದು ಅವರಿಗೆ ತಿಳಿದಿತ್ತು.

ಅಪರಂಪಾರನ ಆಪ್ತ ಸಂಗಾತಿ ಹುಲಿ ಕಡಿದ ನಂಜಯ್ಯ ಶನಿವಾರಸಂತೆಯ ಹೆಮ್ಮನೆಯಿಂದ ಪುಟ್ಟ ಬಸಪ್ಪ ಎಂಬವನನ್ನು ಪತ್ತೆ ಮಾಡಿ ಕಲ್ಯಾಣಸ್ವಾಮಿಯ ಪಾತ್ರಕ್ಕೆ ಹೊಂದುತ್ತಾನೆ ಎಂದು ನಿರ್ಧರಿಸಿ ಪುಟ್ಟ ಬಸಪ್ಪನನ್ನು ಕೆದಂಬಾಡಿ ರಾಮ ಗೌಡನಲ್ಲಿಗೆ ಕರೆದುಕೊಂಡು ಬಂದ. ನಂಜಯ್ಯ ಮತ್ತು ರಾಮಗೌಡ ದೀರ್ಘ ಸಮಾಲೋಚನೆ ನಡೆಸಿದರು. ಪುಟ್ಟಬಸಪ್ಪನನ್ನು ಕಲ್ಯಾಣಸ್ವಾಮಿ ಎಂದು ಬಿಂಬಿಸಿ, ಅವನು ಅಪ್ಪಾಜಿ ಅರಸನ ಎರಡನೆಯ ಮಗ ನಂಜುಂಡ ಅರಸನೆಂದು ಸುದ್ದಿ ಹಬ್ಬಿಸಿ, ರೈತ ದಂಡಿನ ನಾಯಕನನ್ನಾಗಿ ಮಾಡುವುದು, ಮಂಗಳೂರಿನಿಂದ ಬ್ರಿಟಿಷರನ್ನು ಶಾಶ್ವತವಾಗಿ ಓಡಿಸುವುದು ಎಂಬ ತೀರ್ಮಾನಕ್ಕೆ ಬಂದರು. ರಾಮ ಗೌಡನಲ್ಲಿಗೆ ಹೋಗುವವರೆಗೆ ಪುಟ್ಟ ಬಸಪ್ಪನಿಗೆ ತನ್ನ ಕೆಲಸ ಏನು ಎನ್ನುವುದೇ ತಿಳಿದಿರಲಿಲ್ಲ ಎನ್ನಲಾಗಿದೆ.

ಕೆದಂಬಾಡಿ ರಾಮ ಗೌಡ ಉಬರಡ್ಕಕ್ಕೆ ಸಮೀಪದ ಪೂಮಲೆ ಬೆಟ್ಟದ ಮೇಲೆ ಒಂದು ಆಶ್ರಮ ನಿರ್ಮಿಸಿ ಪುಟ್ಟ ಬಸಪ್ಪನನ್ನು ಅದರಲ್ಲಿ ಮೂರು ವಾರಗಳಷ್ಟು ಕಾಲ ಇರಿಸಿಕೊಳ್ಳುತ್ತಾನೆ. ಕಲ್ಯಾಣಸ್ವಾಮಿಯಾಗಿ ಹೇಗೆ ವರ್ತಿಸಬೇಕು ಎಂಬ ಬಗ್ಗೆ ತರಬೇತಿ ನೀಡುತ್ತಾನೆ. 'ಇವನೇ ಕಲ್ಯಾಣಸ್ವಾಮಿ, ಹಾಲೇರಿಯ ಅಪ್ಪಾಜಿ ರಾಜರ ಎರಡನೇ ಮಗ' ಎಂದು ಘೋಷಿಸುತ್ತಾನೆ. ಈ ಜಂಗಮನನ್ನು ಕಾಣಲು ಅಮರಸುಳ್ಯದ ಜನ ಬರುತ್ತಿರುತ್ತಾರೆ. ಅವರ ನಡುವೆ ಹೋರಾಟದ ಬೀಜಗಳನ್ನು ಬಿತ್ತಲಾಗುತ್ತದೆ. ಕಲ್ಯಾಣಸ್ವಾಮಿಯನ್ನು ಭೇಟಿಯಾಗಿ ಬಂದ ಜನರು ಕಲ್ಯಾಣಸ್ವಾಮಿಯನ್ನು ತಮ್ಮ ರಾಜ ನಂಜುಂಡರಸ ಎಂದು ಹೇಳುತ್ತಿದ್ದರು. ಅಂದರೆ ಈ ವಿಧಾನದ ಮೂಲಕ ಜನರಿಗೆ ಕಲ್ಯಾಣಸ್ವಾಮಿಯೇ ತಮ್ಮ ರಾಜ



ಎಂದು ಮನಸ್ಸಿನಲ್ಲಿ ದೃಢೀಕರಣವಾಗುವ ವ್ಯವಸ್ಥಿತ ಯೋಜನೆಯನ್ನು ರಾಮ ಗೌಡ ರೂಪಿಸಿದ್ದನು. ಕಲ್ಯಾಣಸ್ವಾಮಿಯ ಆಶ್ರಮವಿದ್ದ ಪೂಮಲೆಯ ಜಾಗ ರಾಮ ಗೌಡನ ಮನೆಯಿಂದ ಒಂದು ಮೈಲಿ ದೂರದಲ್ಲಿದ್ದುದರಿಂದ ಕಲ್ಯಾಣಸ್ವಾಮಿಯ ಭೇಟಿಗೆಂದು ಬಂದ ಜನರು ರಾಮ ಗೌಡನಲ್ಲಿಗೂ ಬರಲು ಮತ್ತು ವಿಚಾರ ವಿನಿಮಯ ಮಾಡಲು ಸಹಾಯವಾಯಿತು.

ನಾಯಕತ್ವದ ಲಕ್ಷಣವನ್ನು ಮೈಗೂಡಿಸಿಕೊಂಡಿದ್ದ ಕೆದಂಬಾಡಿ ರಾಮ ಗೌಡ ಸಹಜವಾಗಿ ಬಂಡಾಯದ ನೇತೃತ್ವವನ್ನು ವಹಿಸಿಕೊಂಡ. ರಾಮ ಗೌಡ ಅದಾಗಲೇ ೧೨೦೦ ರೈತರ ದಂಡು ಕಟ್ಟಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯ, ಚೆಟ್ಟಿ ಕುಡಿಯ ಮತ್ತು ಕುರ್ತ ಕುಡಿಯರಿಂದ ಶಸ್ತ್ರಾಭ್ಯಾಸ ಮಾಡಿಸುತ್ತಿದ್ದ. ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯ ಸಹೋದರರು ಚಿಕ್ಕವೀರ ರಾಜೇಂದ್ರನ ಸೇನೆಯಲ್ಲಿ ಸುಬೇದಾರರಾಗಿದ್ದವರು. ೧೮೩೪ರಲ್ಲಿ ಚಿಕ್ಕವೀರ ರಾಜೇಂದ್ರ ಬ್ರಿಟಿಷರಿಗೆ ಶರಣಾಗತನಾದಾಗ ಬ್ರಿಟಿಷರು ಗುಡ್ಡೆಮನೆ ಅಪ್ಪಯ್ಯನಿಗೆ ಮತ್ತು ತಮ್ಮಯ್ಯನಿಗೆ ದಿವಾನಗಿರಿಯ ಆಮಿಷ ಒಡ್ಡಿದ್ದರು. ಆದರೆ ಅವರಿಬ್ಬರು ಬ್ರಿಟಿಷರ ಆಮಿಷಗಳಿಗೆ ಬಲಿಯಾಗದೆ ಬಂಡೆದ್ದರು.

ಚೆಟ್ಟಿ ಕುಡಿಯ ಮತ್ತು ಕುರ್ತ ಕುಡಿಯ ಚಿಕ್ಕವೀರ ರಾಜೇಂದ್ರನಿಗೆ ಶಸ್ತ್ರಾಭ್ಯಾಸ ದೀಕ್ಷೆ ನೀಡಿದ ಗುರುಗಳು. ಇವರು ಕೊಡಗಿನ ಬೇಂಗುನಾಡಿನ ನಿವಾಸಿಗಳು. ಚಿಕ್ಕವೀರ ರಾಜನಿಗೆ ಅತ್ಯಂತ ನಿಷ್ಠಾವಂತರಾದವರಾಗಿದ್ದರು. ರಾಮ ಗೌಡರು ಬೇಂಗುನಾಡಿಗೆ ಹೋಗಿ ಕಲ್ಯಾಣಸ್ವಾಮಿ ಸುಳ್ಯದಲ್ಲಿದ್ದು ಚೆಟ್ಟಿ ಕುಡಿಯನೂ, ಕುರ್ತ ಕುಡಿಯನೂ ತಮ್ಮ ಗ್ರಾಮದ ಜನರೊಂದಿಗೆ ಬಂದು ಕಲ್ಯಾಣಸ್ವಾಮಿಯ ಸೈನಿಕನಾಗಬೇಕೆಂದು ಒತ್ತಾಯ ಮಾಡಿದನು. ರಾಮಗೌಡನ ಒತ್ತಾಯವನ್ನು ಮನ್ನಿಸಿ ಚೆಟ್ಟಿ ಕುಡಿಯ, ಕುರ್ತ ಕುಡಿಯ ಮತ್ತು ಅವರೊಂದಿಗೆ ೨೦ ಜನರು ಬಂದು ಕಲ್ಯಾಣಸ್ವಾಮಿಯೊಂದಿಗೆ ಸೇರಿಕೊಂಡರು. ಅವರಿಗೆಲ್ಲ ಕೋವಿಗಳನ್ನೂ, ಒಡಿಕತ್ತಿಗಳನ್ನೂ ಕೊಡಿಸಲಾಯಿತು. ಅವರೆಲ್ಲರೂ ಕೆದಂಬಾಡಿ ರಾಮ ಗೌಡನ ಜೊತೆ ಸೇರಿಕೊಂಡು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸನ್ನದ್ಧರಾದರು.

ಕೆದಂಬಾಡಿ ರಾಮ ಗೌಡನಿಗೆ ಸಮಾಜದಲ್ಲಿ ಗಣ್ಯ ಸ್ಥಾನವಿತ್ತು. ಜನಸಮುದಾಯದ ಮೇಲೆ ಹಿಡಿತವಿತ್ತು. ಸಂಘಟನೆಯ ಚಾಕಚಕ್ಯತೆ ಗೊತ್ತಿತ್ತು.

ಕೊಡಗು ಮತ್ತು ಅಮರಸುಳ್ಯದ ನಡುವೆ ಓಡಾಡಿ ಎರಡೂ ಕಡೆ ಜನರ ಪರಿಚಯವಿತ್ತು. ಸ್ವಾಮಿ ಅಪರಂಪಾರ, ಹುಲಿ ಕಡಿದ ನಂಜಯ್ಯ, ಚೆರಂಜಿ ಸುಬ್ರಾಯ, ಮಾನ್ಯದ ರಂಗಪ್ಪ ಇವರೆಲ್ಲರ ನಡುವಿನ ಸಂವಹನದ ಮೂಲಕ ಹೊರ ಪ್ರಾಂತಗಳಲ್ಲಿ ನಡೆಯುತ್ತಿದ್ದ ಆಗುಹೋಗುಗಳ ಬಗೆಗೆ ಒಂದು ಚಿತ್ರಣವಿತ್ತು. ಹೋರಾಟವನ್ನು ಮುನ್ನಡೆಸಲು ಈತನೇ ಸಮರ್ಥ ನಾಯಕನೆಂಬುದನ್ನು ಎಲ್ಲರೂ ತಿಳಿದಿದ್ದರು. ರಾಮಗೌಡನ ಮನೆತನದ ಒಂದು ಕವಲು ಭಾಗಮಂಡಲ ಸಮೀಪದಲ್ಲಿತ್ತು. ಸುಬ್ರಹ್ಮಣ್ಯ ಸಮೀಪದ ಗುತ್ತಿಗಾರು ಪ್ರದೇಶದಿಂದ ವಲಸೆ ಹೋದ 'ಗುಡ್ಡೆಮನೆ'ಯ ಕವಲೂ ಅದೇ ಪರಿಸರದಲ್ಲಿತ್ತು. ಈ ಎರಡೂ ಮನೆತನಗಳೂ ಭಾಗಮಂಡಲ ಪರಿಸರದಲ್ಲಿ ಪ್ರಭಾವಶಾಲಿಗಳಾಗಿದ್ದುದರಿಂದ ಅಲ್ಲಿ ರೈತ ಸಂಘಟನೆ ಸುಲಭವಾಯಿತು.

ಕೊಡಗಿನ ಬಲಮುರಿಯಲ್ಲಿ ಜನಿಸಿದ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡನು ಕೆದಂಬಾಡಿ ರಾಮಗೌಡನಂತೆಯೇ ಸಂಘಟನಾ ಸಾಮರ್ಥ್ಯವನ್ನು ಹೊಂದಿದವನಾಗಿದ್ದ. ಅಪ್ಪಯ್ಯಗೌಡ ಕೊಡಗಿನ ಕೊನೆಯ ಅರಸ ಚಿಕ್ಕವೀರ ರಾಜನ ಕಾಲದಲ್ಲಿ ಅಮರಸುಳ್ಯದ ಜಮೇದಾರನಾಗಿ ಕಾರ್ಯನಿರ್ವಹಿಸುತ್ತಿದ್ದನು. ಕೊಡಗನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ ಸುಬೇದಾರನಾಗಿ ಕಾರ್ಯ ನಿರ್ವಹಿಸಿದನು. ಆ ಕಾಲದಲ್ಲಿ ಸುಬೇದಾರ್ ಎಂಬುದು ಮಹತ್ವದ ಹುದ್ದೆಯಾಗಿತ್ತು. ಸುಬೇದಾರನಿಗೆ ಒಂದು ನಿರ್ದಿಷ್ಟ ಪ್ರದೇಶದ ಸಾಗುವಳಿ ಭೂಮಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡಲಾಗುತ್ತಿತ್ತು. ಆ ಭೂಮಿಯನ್ನು ಸುಬೇದಾರ ಹಲವು ಜಮೀನ್ದಾರರಿಗೆ ಹಂಚುತ್ತಿದ್ದ. ರೈತರು ಕೊಡುವ ತೆರಿಗೆಯಲ್ಲಿ ಸ್ವಲ್ಪ ತಾನಿರಿಸಿಕೊಂಡು ಉಳಿದುದನ್ನು ಬೊಕ್ಕಸಕ್ಕೆ ಸಲ್ಲಿಸಬೇಕಾಗಿತ್ತು. ರಾಜನಿಗೆ ವಿಶ್ವಾಸಾರ್ಹರು ಮಾತ್ರ ಆ ಹುದ್ದೆಯನ್ನು ಪಡೆಯುತ್ತಿದ್ದರು. ಗುಡ್ಡೆಮನೆ ಅಪ್ಪಯ್ಯ ಗೌಡ ಅಂತಹ ವಿಶ್ವಾಸಾರ್ಹ ವ್ಯಕ್ತಿಯಾಗಿದ್ದ. ಮುಂದೆ ರೈತ ಹೋರಾಟದ ಪ್ರಮುಖ ವ್ಯಕ್ತಿಯಾಗಿ, ಭಾಗಮಂಡಲ ಪರಿಸರದಲ್ಲಿ ರೈತರನ್ನು ಸಂಘಟಿಸಿದನು. ಇವರ ಇಬ್ಬರು ತಮ್ಮಂದಿರು ತಮ್ಮಯ್ಯ ಮತ್ತು ಪೊನ್ನಪ್ಪ.

## ಅಮರಸುಳ್ಯ ಹೋರಾಟದ ಕೇಂದ್ರ ಬಿಂದು

ಹೋರಾಟ ಸುಳ್ಯದಿಂದ ಆರಂಭವಾಯಿತು. ಇದಕ್ಕೆ ಒಂದು ಮುಖ್ಯ ಕಾರಣ ಕೊಡಗು ಬ್ರಿಟಿಷರ ವಶದಲ್ಲಿತ್ತು. ಈಗಾಗಲೇ ಅವರು ಕೊಡವ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ವೀರರಾಜನ ಪದಚ್ಯುತಿಯ ವಿಷಯದಲ್ಲಿ ದಿವಾನರಾಗಿದ್ದ ಕೊಡವರಾದ ಅಪ್ಪಾರಂಡ ಬೋಪು ಮತ್ತು ಚೆಪ್ಪುಡಿರ ಪೊನ್ನಪ್ಪ ಇವರ ಪಾತ್ರದ ಕುರಿತು ಇತರ ಸಮುದಾಯಗಳ ಕೆಲವು ಜನರಿಗೆ ಅಸಮಾಧಾನವಿತ್ತು. ಹೋರಾಟಕ್ಕೆ ತಮ್ಮ ಬೆಂಬಲವಿದೆಯೆಂದು ನಂಬಿಸಿದ್ದ ದಿವಾನರುಗಳ ಇಬ್ಬಗೆಯ ನಿಲುವು ಹೋರಾಟದ ನಾಯಕರಿಗೆ ತಿಳಿದಿತ್ತು. ಚಿಕ್ಕವೀರ ರಾಜನಿಗೆ ಬಂದೂಕು ಕಲಿಸಿದ ಗುರು ಚೆಟ್ಟಿ ಕುಡಿಯನಂತೂ ಬೋಪುವಿನ ಬಗ್ಗೆ ತೀವ್ರ ಸಿಟ್ಟನ್ನು ಹೊಂದಿದ್ದನು. ಕೊಡಗಿನ ಸಮಾಜ ಒಡೆದುಹೋಗಿತ್ತು. ಇಂಥ ಪರಿಸ್ಥಿತಿಯಲ್ಲಿ ಕೊಡಗಿನಿಂದ ಹೋರಾಟವನ್ನು ಪ್ರಾರಂಭಿಸುವುದು ಕಠಿಣ ಕಾರ್ಯವಾಗಿತ್ತು. ಮೊದಲು ಮಂಗಳೂರನ್ನು ಗೆದ್ದು, ಆಮೇಲೆ ಮಡಿಕೇರಿಯನ್ನು ವಶಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು. ಅಮರಸುಳ್ಯದಿಂದಾಚೆಗೆ ಕೆನರಾ ಜಿಲ್ಲೆಯಲ್ಲಿ ಅಥವಾ ಇತರ ಪ್ರಾಂತ್ಯಗಳಲ್ಲಿ ಇಂತಹದೊಂದು ಹೋರಾಟವನ್ನು ಆರಂಭಿಸುವುದು ಅಸಾಧ್ಯ ಕೆಲಸವಾಗಿತ್ತು.

ಸುಳ್ಯ ಪ್ರದೇಶದಲ್ಲಿ ಗೌಡಕನ್ನಡ ಮನೆಮಾತಿನ ಗೌಡ ಸಮುದಾಯದ ಜನರೇ ಅಧಿಕ ಸಂಖ್ಯೆಯಲ್ಲಿದ್ದರು. ಕೆದಂಬಾಡಿ ರಾಮಗೌಡನಿಗೆ ಅವರ ಜೊತೆ ಉತ್ತಮ ಸಂಬಂಧವಿತ್ತು. ಇವರೆಲ್ಲರ ನೆಂಟರಿಷ್ಟರ ಸಂಖ್ಯೆ ದೊಡ್ಡದಿತ್ತು. ಇಡೀ ಗೌಡ ಸಮುದಾಯದ ನಡುವೆ ಹೋರಾಟದ ಕಿಚ್ಚನ್ನು ಹಚ್ಚಿ ಹರಡುವುದು ಸುಲಭದ ಕೆಲಸವಾಗಿತ್ತು. ಹೋರಾಟವನ್ನು ಕಾರ್ಯಗತಗೊಳಿಸಲು ಅಮರಸುಳ್ಯ ಹೇಳಿಮಾಡಿಸಿದ ಸ್ಥಳವಾಗಿತ್ತು. ಅದೂ ಅಲ್ಲದೆ ಅಮರಸುಳ್ಯ ಬ್ರಿಟಿಷ್ ಅಧಿಕಾರಿಗಳ ಸಂಪರ್ಕದಿಂದ ದೂರವಿತ್ತು. ಬಂಡಾಯದ ಯೋಜನೆಯು ಹೊರ ಪ್ರಾಂತ್ಯಕ್ಕೆ ಸೋರಿಹೋಗಲು ಅವಕಾಶ ಕಡಿಮೆಯಿತ್ತು. ಕಂಪೆನಿಯ ಸ್ಥಳೀಯ ನೌಕರರು ತಮ್ಮವರನ್ನು ಬಿಟ್ಟು ಕೊಡುವ ಸಾಧ್ಯತೆ ಕಡಿಮೆಯಿತ್ತು.

ಈ ಎಲ್ಲ ಕಾರಣಗಳಿಗಾಗಿ ಅಮರಸುಳ್ಯ ಉದ್ದೇಶಿತ ಹೋರಾಟಕ್ಕೆ ಸೂಕ್ತ ವೇದಿಕೆಯನ್ನು ಒದಗಿಸಿಕೊಟ್ಟಿತು. ಅದಕ್ಕೆಂದೇ ಇಂದು ಇತಿಹಾಸದ ಪುಟಗಳಲ್ಲಿ ಉಳಿದುಹೋಗಿದೆ.

## ಹೋರಾಟದ ಆರಂಭ

ಮುಂದೆ ೧೮೩೭ರ ಮಾರ್ಚ್ ೩೦ರಂದು ಕೆದಂಬಾಡಿ ರಾಮಗೌಡ ತನ್ನ ಮಗನಿಗೆ ಮದುವೆಯಿದೆ ಎಂದು ಸುದ್ದಿ ಹಬ್ಬಿಸಿ ತನಗೆ ಸೇರಿದ ಸುಳ್ಯ

ಸನಿಹದ ಉಬರಡ್ಕ ಮಿತ್ತೂರು ಗ್ರಾಮದಲ್ಲಿರುವ ವಿಶಾಲವಾದ ಗದ್ದೆಯಲ್ಲಿ ಚಪ್ಪರ ಹಾಕಿಸಿ ಊರ ಜನರನ್ನು ಆಮಂತ್ರಿಸಿದನು. ಅದಕ್ಕೆ ತಕ್ಕಂತೆ ಮಗನಿಗೆ ಮದುವೆ ಮಾಡಿಸಿದ. ಅಲ್ಲಿಗೆ ಕಲ್ಯಾಣಸ್ವಾಮಿಯನ್ನು ಪೂಮಲೆ ಬೆಟ್ಟದಿಂದ ಕರೆದುಕೊಂಡು ಬರಲಾಗುತ್ತದೆ. ಅಮರಸುಳ್ಯದ ಸಾವಿರಕ್ಕೂ ಹೆಚ್ಚು ರೈತರು ಖಡ್ಗ, ಬರ್ಚಿ, ಕತ್ತಿ, ಬಂದೂಕು ಮೊದಲಾದ ಆಯುಧಗಳೊಂದಿಗೆ ಅಲ್ಲಿ ಸೇರಿದ್ದರು. ಮದುವೆಯಾಗಿ ಒಂದು ರಾತ್ರಿಯನ್ನು ಮಾತ್ರ ಮಡದಿಯೊಡನೆ ಕಳೆದ ಕೆದಂಬಾಡಿ ರಾಮಗೌಡನ ಮಗ ಮರುದಿನ ಬೆಳಗ್ಗೆ ಕೋವಿ ಹಿಡಿದುಕೊಂಡು ದಂಡಿನೊಡನೆ ಬ್ರಿಟಿಷರನ್ನು ಎದುರಿಸಲು ಹೊರಟ! ಮದುವೆಯೆಂಬುದು ಜನರು ಒಂದೆಡೆ ಸೇರಿ ಅಲ್ಲಿಂದ ಮುಂದೆ ಸಂಗ್ರಾಮಕ್ಕೆ ಹೊರಡುವ ಆರಂಭದ ನಡೆಯಾಗಿತ್ತು. ಹಾಗಾಗಿ ಆ ಪ್ರದೇಶ ಮದುವೆಗದ್ದೆಯಾಯಿತಂತೆ. ಅಮಲ್ದಾರ ಅಟ್ಲೂರು ರಾಮಪ್ಪಯ್ಯನನ್ನು ಮದುವೆಗದ್ದೆಗೆ ಕರೆತರಲು ಕೆಲವರನ್ನು ಕಳುಹಿಸಲಾಗುತ್ತದೆ. ಆರಂಭದಲ್ಲಿ ಬಂಡಾಯದ ಪರ ಇದ್ದ ರಾಮಪ್ಪಯ್ಯ ಕೊನೆಯ ಹಂತದಲ್ಲಿ ಹೋರಾಟದಲ್ಲಿ ಭಾಗವಹಿಸದಿರಲು ತೀರ್ಮಾನಿಸಿದ.

ಅಟ್ಲೂರು ರಾಮಪ್ಪಯ್ಯ ದಂಡಿನೊಂದಿಗೆ ಸೇರದೆ ಇದ್ದರೆ ಆತ ಅಪಾಯಕಾರಿಯಾಗುವ ಸಾಧ್ಯತೆ ಇತ್ತು. ಆತನಿಂದ ಬ್ರಿಟಿಷರಿಗೆ ಅಥವಾ ಸಹೋದರ ದಿವಾನ ಲಕ್ಷ್ಮೀನಾರಾಯಣನಿಗೆ ಒಳಸಂಚಿನ ಮಾಹಿತಿ ಸೋರಿ ಹೋಗುತ್ತಿತ್ತು. ಅದರಿಂದ ಅಲ್ಲಿಯ ತನಕ ಹಾಕಿದ ಶ್ರಮ ವ್ಯರ್ಥವಾಗುವ ಸಾಧ್ಯತೆ ಅಧಿಕವಾಗಿತ್ತು. ಈ ಇಕ್ಕಟ್ಟಿನ ನಡುವೆ ರಾಮಪ್ಪಯ್ಯನನ್ನು ಒಂದೋ ತಮ್ಮ ಪರವಾಗಿ ಒಲಿಸಿಕೊಳ್ಳುವುದು, ಅದು ಸಾಧ್ಯವಾಗದಿದ್ದರೆ ನಿವಾರಿಸುವುದು ಕೆದಂಬಾಡಿ ರಾಮಗೌಡನಿಗೆ ಅನಿವಾರ್ಯವಾಗಿತ್ತು.

ಸುಳ್ಯದ ಕಾಂತಮಂಗಲ ಹತ್ತಿರದ ಅಟ್ಲೂರು ಎಂಬಲ್ಲಿಯ ದೊಡ್ಡ ಜಮೀನ್ದಾರ ಸ್ಥಾನಿಕ ಬ್ರಾಹ್ಮಣ ತುದಿಯಡ್ಕ ರಾಮಪ್ಪಯ್ಯ. ಅವನು ಸುಳ್ಯದ ಅಮಲ್ದಾರನಾಗಿದ್ದನು. ಅಮರಸುಳ್ಯದ ಜನರನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದನು. ಅವನು ವಾಸವಿದ್ದ ಊರಿನ ಕಾರಣದಿಂದಾಗಿ ಅಟ್ಲೂರು ರಾಮಪ್ಪಯ್ಯ ಎಂದು ಪ್ರಸಿದ್ಧನಾಗಿದ್ದ. ಅನಕ್ಷರಸ್ಥ ರೈತರಿಂದ ಹೆಬ್ಬೆಟ್ಟು ಒತ್ತಿಸಿ ಬಲಾತ್ಕಾರದಿಂದ ರೈತರ ಭೂಮಿಯನ್ನು ತನ್ನದನ್ನಾಗಿ ಮಾಡಿಕೊಳ್ಳುತ್ತಿದ್ದ. ತಮ್ಮ ಆಸ್ತಿಯನ್ನು ಬಿಟ್ಟುಕೊಡಲು ಒಪ್ಪದೆ ಇರುವವರಿಗೆ ರಾಮಪ್ಪಯ್ಯನ ಕಡೆಯ ಜನರು ಹೊಡೆಯುತ್ತಿದ್ದರು.



ಹಾಗಾಗಿ ಅಮರಸುಳ್ಯದ ರೈತರ ಕೋಪಕ್ಕೆ ಗುರಿಯಾಗಿದ್ದ. ಅವನ ಅಣ್ಣನೇ ಕೊಡಗಿನ ದಿವಾನ ತುದಿಯಡ್ಕ ಲಕ್ಷ್ಮೀನಾರಾಯಣ. ಲಕ್ಷ್ಮೀನಾರಾಯಣನು ಕೊಡಗು ಸಂಸ್ಥಾನದಲ್ಲಿ ಮೊದಲು ಕರಣಿಕನಾಗಿ, ನಂತರ ಚಿಕ್ಕವೀರ ರಾಜನ ಕೃಪಾಕಟಾಕ್ಷಕ್ಕೆ ಒಳಗಾಗಿ ದಿವಾನ ಹುದ್ದೆಗೆ ಭಡ್ತಿಯನ್ನು ಪಡೆದು, ಮುಂದೆ ಬ್ರಿಟಿಷ್ ಆಧಿಪತ್ಯದಲ್ಲೂ ದಿವಾನ್ ಆಗಿ ಮುಂದುವರೆದಿದ್ದ. ಅಣ್ಣನಿಗಿದ್ದ ಉನ್ನತ ಸ್ಥಾನವು ರಾಮಪ್ಪಯ್ಯ ಪ್ರಭಾವಶಾಲಿಯಾಗಿ ಬೆಳೆಯಲು ಕಾರಣ.

ಅಟ್ಲೂರು ರಾಮಪ್ಪಯ್ಯನನ್ನು ಓಲೈಸಿ ದಂಡಿಗೆ ಸೇರಲು ಆಹ್ವಾನಿಸಲಾಗುತ್ತದೆ. ಅವರ ಆಹ್ವಾನವನ್ನು ರಾಮಪ್ಪಯ್ಯ ನಿರಾಕರಿಸಿದುದಲ್ಲದೆ ತನ್ನಲ್ಲಿಗೆ ಬಂದ ಜನರನ್ನು ಗುಂಡು ಹೊಡೆದು ಕೊಲ್ಲಲು ಪ್ರಯತ್ನಿಸುತ್ತಾನೆ. ಕಾದಾಟ ಶುರುವಾಗುತ್ತದೆ. ಅವರು ರಾಮಪ್ಪಯ್ಯನನ್ನು, ಅವನ ಕುದುರೆಯನ್ನು ಮತ್ತು ಅಣ್ಣ ಶಿವಣ್ಣಯ್ಯನನ್ನು ಸೆರೆ ಹಿಡಿದು ತರುತ್ತಾರೆ.

ಕೆದಂಬಾಡಿ ರಾಮಗೌಡನ ಮದುವೆಗದ್ದೆಯಲ್ಲಿ ಪುಟ್ಟ ಬಸಪ್ಪನಿಗೆ ಸಮರದ ಅಧಿಕೃತ ಪಟ್ಟವನ್ನು ಕಟ್ಟಲಾಗುತ್ತದೆ. 'ಇವನೇ ಕಲ್ಯಾಣಸ್ವಾಮಿ. ಹಾಲೇರಿ ಸಂಸ್ಥಾನದ ಉತ್ತರಾಧಿಕಾರಿಯಾದ ನಂಜುಂಡಪ್ಪಾಜಿ ಒಡೆಯ' ಎಂದು ಘೋಷಿಸಲಾಯಿತು. ಜೊತೆಗೆ ಕಲ್ಯಾಣಸ್ವಾಮಿಗೆ ಮದುವೆಗದ್ದೆ ಸನಿಹದ ಮಿತ್ತೂರು ನಾಯರ್ ದೈವದ ಕೆಂಪುಕೊಡೆಯನ್ನು ಹಿಡಿಯುತ್ತಾರೆ. ಅಟ್ಲೂರಿನಿಂದ ಬಂಧಿತರ ಜೊತೆಗೆ ತಂದಿದ್ದ ರಾಮಪ್ಪಯ್ಯನ ಕುದುರೆಯನ್ನು ಸಮರದ ಅಧಿಕೃತ ನಾಯಕ ಕಲ್ಯಾಣಸ್ವಾಮಿಗೆ ಒಪ್ಪಿಸಲಾಗುತ್ತದೆ.

ಮದುವೆಗದ್ದೆಯಿಂದ ಹೊರಟ ಪಡೆ ಮೊದಲು ಬೆಳ್ಳಾರೆಯತ್ತ ಸಾಗುತ್ತದೆ. ಹೋರಾಟಗಾರರು ಅಟ್ಲೂರು ರಾಮಪ್ಪಯ್ಯನ ಕೈಗಳನ್ನು ಕಟ್ಟಿ ಆತನನ್ನು ಜತೆಯಲ್ಲೇ ನಡೆಸಿಕೊಂಡು ಸುಳ್ಯದಿಂದ ಬೆಳ್ಳಾರೆ ಪೇಟೆಯವರೆಗೆ ಕರೆದೊಯ್ಯುತ್ತಾರೆ. ರಾಮಪ್ಪಯ್ಯನನ್ನು ಬಂದಿಯಾಗಿ ಒಟ್ಟಿಗೆ ಕರೆದೊಯ್ಯುವುದು ಅಥವಾ ಅವನಿಗೆ ಕ್ಷಮಾದಾನ ನೀಡುವುದು ಎರಡನ್ನೂ ಕೆದಂಬಾಡಿ ರಾಮಗೌಡ ವಿರೋಧಿಸುತ್ತಾನೆ. ರಾಮಪ್ಪಯ್ಯ ಸಂಗ್ರಾಮಕ್ಕೆ ಸೇರುವ ಯಾವ ಒಲವನ್ನೂ ತೋರಿಸುವುದಿಲ್ಲ. ಬೇರೆ ದಾರಿಯಿಲ್ಲದೆ ಕಲ್ಯಾಣಸ್ವಾಮಿ ಅವನಿಗೆ ಮರಣದಂಡನೆ ಶಿಕ್ಷೆ ವಿಧಿಸಿ ಅದನ್ನು ಜಾರಿಗೊಳಿಸಲು ಪಟ್ರಕೋಡಿ ಸಣ್ಣಪ್ಪ ಮತ್ತು ಉಳುವಾರು ಕೃಷ್ಣರಿಗೆ ಆದೇಶಿಸುತ್ತಾನೆ. ಉಳುವಾರು ಕೃಷ್ಣ ಕತ್ತಿಯಿಂದ ರಾಮಪ್ಪಯ್ಯನ

ಕುತ್ತಿಗೆಯನ್ನು ಕತ್ತರಿಸುತ್ತಾನೆ. ಕೊಲೆಗಾರನೆಂದು ಪಟ್ರಕೋಡಿ ಸಣ್ಣಪ್ಪನಿಗೆ ಮುಂದೆ ಬ್ರಿಟಿಷರು ಹತ್ತು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿದರು. ಇನ್ನೊಬ್ಬ ಆರೋಪಿ ಉಳುವಾರು ಕೃಷ್ಣನನ್ನು ಸಿಂಗಾಪುರಕ್ಕೆ ಗಡಿಪಾರು ಮಾಡಲಾಯಿತು. ರಾಮಪ್ಪಯ್ಯನ ಹತ್ಯೆಯೊಂದಿಗೆ ಬಂಡಾಯದ ಆಸ್ಫೋಟವಾಯಿತು.

ರಾಮಪ್ಪಯ್ಯನ ಸಾವು ದಂಗೆಯ ಪ್ರಮುಖ ಘಟನೆ. ಬ್ರಿಟಿಷರ ಗುಪ್ತಚರನಾಗಿದ್ದ ಅವನ ಮರಣದಿಂದ ಬ್ರಿಟಿಷರು ಶೀಘ್ರವಾಗಿ ಎಚ್ಚೆತ್ತುಕೊಳ್ಳಬಹುದಾದ್ದರಿಂದ ಹೋರಾಟಗಾರರು ಈಗ ಸುಮ್ಮನೆ ಕುಳಿತುಕೊಳ್ಳುವಂತಿರಲಿಲ್ಲ.

ಬೆಳ್ಳಾರೆ ತಲುಪುವಷ್ಟರಲ್ಲಿ ಸುಳ್ಯ ಪರಿಸರದಾದ್ಯಂತ ಜನರು ಅಲ್ಲಿ ಸೇರಿದ್ದರು. ಲೆವಿನ್ ವರದಿಯ ಪ್ರಕಾರ 'ಅದರಲ್ಲಿ ಸುಮಾರು ಒಂದು ಸಾವಿರ ಜನರು ಕೋವಿ ಹಿಡಿದಿದ್ದರು'. ಮಾರ್ಚ್ ೩೦ರಂದು ಬೆಳ್ಳಾರೆ ಪೇಟೆಯಲ್ಲಿ ಕಂಪೆನಿಯ ಖಜಾನೆಯನ್ನು ಸ್ವಾಧೀನ ಮಾಡುವುದರೊಂದಿಗೆ ಬ್ರಿಟಿಷರ ವಿರುದ್ಧದ ರೈತ ದಂಗೆ ಆರಂಭಗೊಂಡಿತು. ಸ್ಥಳೀಯ ಅಧಿಕಾರಿ ಶಿರಸ್ತೇದಾರ ದೇವಪ್ಪ ಪ್ರತಿಭಟನೆ ಮಾಡಿದರೂ ಪ್ರಯೋಜನವಾಗುವುದಿಲ್ಲ. ಮುಖ್ಯ ಶಿರಸ್ತೇದಾರ, ತಹಶೀಲ್ದಾರ ಮತ್ತಿತರ ಮುಖ್ಯ ಉದ್ಯೋಗಿಗಳನ್ನು ಬಂಧಿಸಿದರು. ಈ ಖಜಾನೆಯನ್ನು ಗುಡ್ಡೆ ತಿಮ್ಮಣ್ಣ ಎಂಬವರ ವಶಕ್ಕೆ ಕೊಡಲಾಯಿತು. ನಿಡ್ಯಮಲೆ ತಿಮ್ಮಪ್ಪ ಎಂಬಾತ ಕ್ಯಾಪ್ಟನ್ ಲೀ ಹಾರ್ಡಿ ಮುಂದೆ ಹೇಳಿಕೆ ನೀಡಿದ ಪ್ರಕಾರ ಬೆಳ್ಳಾರೆಯಲ್ಲಿ ೩,೦೦೦ ಸಂಖ್ಯೆಯಷ್ಟು ಜನ ಸೇರಿರುತ್ತಾರೆ. ದಂಡಿನಲ್ಲಿ ೨ ಆನೆ ಮತ್ತು ೪ ಕುದುರೆಗಳು ಇದ್ದ ಬಗ್ಗೆ ಶಿರಸ್ತೇದಾರ ದೇವಪ್ಪ ಮುಂದೆ ಸಾಕ್ಷ್ಯ ನೀಡುವಾಗ ಹೇಳಿದ್ದಾನೆ. ೧೮೩೭ ಮಾರ್ಚ್ ೩೦ರ ರಾತ್ರಿಯೇ ಕಲ್ಯಾಣಸ್ವಾಮಿಯನ್ನು ರಾಜನೆಂದು ಘೋಷಿಸಲಾಯಿತು. ಖಜಾನೆಯಲ್ಲಿದ್ದ ಹಣದಲ್ಲಿ ಸ್ವಲ್ಪ ಹಣವನ್ನು ಕಲ್ಯಾಣಸ್ವಾಮಿ ಕಡೆಗೆ, ಸೇರಿದ ಜನರಿಗೆ ಹಂಚಿದರು. ಉಳಿದ ಹಣವನ್ನು ಪೆಟ್ಟಿಗೆಯಲ್ಲಿಟ್ಟು ಭದ್ರಪಡಿಸಿದರು. ಈ ಹೊತ್ತಿಗೆ ಕಲ್ಯಾಣಸ್ವಾಮಿಯು ಕೊಡಗಿನ ಪಟ್ಟಕ್ಕೆ ನಿಜವಾದ ಉತ್ತರಾಧಿಕಾರಿ ಹೌದೋ ಅಲ್ಲವೋ ಎಂಬ ಬಗ್ಗೆ ಜನರಲ್ಲಿ ಯಾವ ಸಂಶಯವೂ ಇದ್ದಿರಲಿಲ್ಲ. ರಾಮಯ್ಯ ಗೌಡನೂ, ಕುಕನೂರು ಚಿನ್ನಯ್ಯ ಎಂಬ ಮುಖ್ಯಸ್ಥನೂ ನಾಲ್ಕು ಮಂದಿ ಬ್ರಾಹ್ಮಣರಿಂದ ನಂಜುಂಡ ಅರಸರ ಹೆಸರಿನಲ್ಲಿ ನಿರೂಪಗಳನ್ನು ಬರೆಯಿಸಿ



ಚೆಂಬು, ಪೆರಾಜೆಗಳ ಪಾರುಪತ್ಯಗಾರರಿಗೂ, ಕೊಡಗಿನ ದಿವಾನರಾಗಿದ್ದ ಚೆಪ್ಪುಡೀರ ಪೊನ್ನಪ್ಪ ಮುಂತಾದವರಿಗೆ ಕಳಿಸಿದರು. ಈ ನಿರೂಪದಲ್ಲಿ ಜನರು ತಮ್ಮ ಹಿಂದಿನ ರಾಜಮನೆತನಕ್ಕೆ ಭಕ್ತಿಯನ್ನು ತೋರಿಸಬೇಕು. ಕೊಡಗನ್ನು ಬ್ರಿಟಿಷರಿಂದ ಸ್ವತಂತ್ರಗೊಳಿಸಲು ಇರುವ ಅವಕಾಶವನ್ನು ಕಳಕೊಳ್ಳಬಾರದೆಂದು ತಿಳಿಸಲಾಗಿತ್ತು. ಮಾರನೇ ದಿನ ಅಂದರೆ ಮಾರ್ಚ್ ೩೧ರಂದು ಹೊಸ ರಾಜನು ಕೆಲವು ಘೋಷಣೆಗಳನ್ನು ಹೊರಡಿಸಿದನು. ಕಾಟನ್ ವರದಿಯು ಹೇಳುವ ಪ್ರಕಾರ ಅವುಗಳಲ್ಲಿ ಕೆಲವು ಹೀಗಿವೆ:

೧. ಜನರು ಬ್ರಿಟಿಷರಿಗೆ ಕೊಡುವ ಕಪ್ಪ ಕಾಣಿಕೆಗಳನ್ನು ಕೂಡಲೇ ನಿಲ್ಲಿಸಬೇಕು.

೨. ಕೊಡಗಿನ ಪಟ್ಟವನ್ನು ಏರಿದ ಕಲ್ಯಾಣಸ್ವಾಮಿಯನ್ನು ರಾಜನೆಂದು ಮಾನ್ಯ ಮಾಡಿ ಗೌರವಿಸಬೇಕು.

೩. ಕೊಡಗನ್ನು ಬ್ರಿಟಿಷರಿಂದ ಸ್ವತಂತ್ರಗೊಳಿಸಲು ಸಹಾಯ ಮಾಡುವ ರೈತರು ಮುಂದಿನ ಮೂರು ವರ್ಷಗಳವರೆಗೆ ಕಂದಾಯವನ್ನು ಕೊಡಬೇಕಾಗಿಲ್ಲ.

೪. ಬ್ರಿಟಿಷರು ವಿಧಿಸಿದ ಯಾವುದೇ ಸುಂಕವನ್ನು ಜನರು ಇನ್ನು ಮುಂದೆ ಸಲ್ಲಿಸಬೇಕಾಗಿಲ್ಲ.

ಕಲ್ಯಾಣಸ್ವಾಮಿಯ ಕಡೆಯಿಂದ ಈ ಪತ್ರ ವ್ಯವಹಾರಗಳ ಜವಾಬ್ದಾರಿಯನ್ನು ಕರಣಿಕ ಸುಬ್ಬಯ್ಯ ವಹಿಸಿಕೊಂಡಿದ್ದನು.

## ಬೆಳ್ಳಾರೆಯ ಸಭೆ

೧೮೩೭ರ ಏಪ್ರಿಲ್ ೧ ರಂದು ಹೋರಾಟಗಾರರು ಬೆಳ್ಳಾರೆಯಲ್ಲಿ ಸಭೆ ಸೇರಿ ತಮ್ಮ ಮುಂದಿನ ಯೋಜನೆಗಳ ಬಗ್ಗೆ ನಿರ್ಧರಿಸಿದರು. ಅವರ ಯೋಜನೆಗಳ ಮುಖ್ಯಾಂಶಗಳು ಹೀಗಿವೆ :

೧. ಹೋರಾಟಗಾರರು ಮಂಗಳೂರನ್ನು ವಶಪಡಿಸಿಕೊಳ್ಳಲು ಹೋಗಬೇಕು. ಇದು ಇಡೀ ಹೋರಾಟಕ್ಕೆ ತಿರುವು ಕೊಟ್ಟಿರುವ ಸಂಗತಿಯಾಗಿದೆ. ಇದುವರೆಗೆ ಹೋರಾಟವು ಮಡಿಕೇರಿಯ ಕಡೆಗೆ ಕೇಂದ್ರೀಕೃತವಾಗಿತ್ತು. ಇದೇ ಪ್ರಥಮ ಬಾರಿಗೆ ಮಂಗಳೂರನ್ನು ಕೇಂದ್ರೀಕರಿಸಿತು.

'ಕಲ್ಯಾಣಸ್ವಾಮಿಯ ಉದ್ದೇಶ ಮಡಿಕೇರಿ ಕೋಟೆಯನ್ನು ಹಿಡಿಯುವುದೇ ಆಗಿದ್ದರೆ, ಆತನ ಸೈನ್ಯವು ಮಂಗಳೂರು ಕಡೆಗೆ ಹೋಗದೆ ಮಡಿಕೇರಿ ಕಡೆಗೆ ಹೋಗಬೇಕಾಗಿತ್ತಲ್ಲವೇ?' ಎಂಬ ಪ್ರಶ್ನೆಯನ್ನು ಮುಂದೆ ಮೇ ೧೫ ರಂದು ತನಿಖಾಧಿಕಾರಿಗಳು ಸೆರೆ ಸಿಕ್ಕ ಕುಕನೂರು ಚೆನ್ನಯ್ಯನನ್ನು ಕೇಳಿದಾಗ, 'ಪಂಜದ ಜ್ಯೋತಿಷಿಯೊಬ್ಬನ ಸಲಹೆಯಂತೆ ಮಂಗಳೂರಿಗೆ ಹೋದದ್ದು' ಎಂದು ಹೇಳುತ್ತಾನೆ. ಈ ಜ್ಯೋತಿಷಿಯ ಹೆಸರು ಮುಜುತ್ತಾಯ ಎಂದು ದಾಖಲಾಗಿದ್ದು ಈತ ಹಾಲೇರಿ ಅರಸರ ಆಸ್ಥಾನ ಜ್ಯೋತಿಷಿಯಾಗಿದ್ದು ನಂತರ ಕಲ್ಯಾಣಸ್ವಾಮಿಯ ಸಲಹೆಗಾರನಾದ ಎಂದು ಹೇಳಲಾಗಿದೆ. ಏನೇ ಇದ್ದರೂ ಈ ಸಲಹೆಯು ಬ್ರಿಟಿಷರ ಲೆಕ್ಕಾಚಾರವನ್ನು ದಿಕ್ಕು ತಪ್ಪಿಸುವುದರಲ್ಲಿ ಯಶಸ್ವಿಯಾಯಿತು. ಹೋರಾಟಗಾರರ ಚಲನೆಯ ದಿಕ್ಕು ಇದ್ದಕ್ಕಿದ್ದಂತೆ ಬದಲಾದ್ದರಿಂದ ಬ್ರಿಟಿಷ್ ಅಧಿಕಾರಿಗಳು ಗೊಂದಲಕ್ಕೆ ಒಳಗಾದರು ಎಂಬುದನ್ನು ಮುಂದಿನ ಸಂಗತಿಗಳು ಸ್ಪಷ್ಟಪಡಿಸುತ್ತವೆ. ಹೋರಾಟಗಾರರನ್ನು ತಡೆಯಲು ಸಂಪಾಜೆ ಬಳಿ ಬೀಡುಬಿಟ್ಟಿದ್ದ ಲೀ ಹಾರ್ಡಿಗೆ ಅಲ್ಲಿ ಯಾರೂ ಕಾಣಲೇ ಇಲ್ಲ. ಕೊಡಗಿನ ಕಾವಲಿಗೆ ಅವರು ತಯಾರಾಗಿದ್ದಷ್ಟು ಮಂಗಳೂರಿನ ಕಾವಲಿಗೆ ತಯಾರಾಗಿರಲಿಲ್ಲ. ೧೮೩೭ರ ಏಪ್ರಿಲ್ ಒಂದರಂದು ಬೆಳಗ್ಗೆ ೧೦ ಗಂಟೆಗೆ ಪುತ್ತೂರಿನಿಂದ ಕಲೆಕ್ಟರ್ ಲೆವಿನ್ ಮಂಗಳೂರಿನ ವೈಟ್ ಎಂಬವನಿಗೆ ಬರೆದ ಪತ್ರದಲ್ಲಿ 'ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಸಶಸ್ತ್ರ ಗುಂಪು ಅಡ್ಡಾಡುತ್ತಿದೆ. ಆದರೆ ಮಂಗಳೂರಿನಲ್ಲಿ ಯಾವುದೇ ಮುನ್ನೆಚ್ಚರಿಕೆಯ ಕ್ರಮ ಅಗತ್ಯವಿಲ್ಲ. ಅವರು ಮಂಗಳೂರು ಕಡೆಗೆ ನುಗ್ಗುವುದು ಅಸಂಭವ' ಎಂದು ಬರೆದಿದ್ದಾರೆ. ಈ ಪತ್ರ ಬರೆಯುವ ಹೊತ್ತಿನವರೆಗೆ ಲೆವಿನ್‌ಗೆ ಬಂಡಾಯಗಾರರು ಮಂಗಳೂರನ್ನು ಆಕ್ರಮಿಸುವ ಯೋಜನೆಯ ಸೂಚನೆಯೇ ಸಿಕ್ಕಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

೨. ಯೋಜನೆಯ ಪ್ರಕಾರ ಹೋರಾಟಗಾರರು ಪುತ್ತೂರಿನವರೆಗೆ ಒಟ್ಟಾಗಿಯೇ ಹೋಗಬೇಕು. ಪುತ್ತೂರನ್ನು ಮೊದಲು ವಶಪಡಿಸಿಕೊಳ್ಳಬೇಕು. ನಂತರ ಮೂರು ತಂಡಗಳಾಗಿ ವಿಭಜಿಸಿಕೊಂಡು ಹೋರಾಟವನ್ನು ಮುಂದುವರಿಸಬೇಕು.



ಮೊದಲನೆಯ ತಂಡ ಪುತ್ತೂರಿನಿಂದ ಬಂಟ್ವಾಳ ಮಾರ್ಗವಾಗಿ ಮಂಗಳೂರು ತಲುಪಿ, ಏಪ್ರಿಲ್ ೫ ರಂದು ಮಂಗಳೂರನ್ನು ವಶಪಡಿಸಿಕೊಳ್ಳುವುದು. ಇದರ ನಾಯಕತ್ವ ವಹಿಸುವವನು ಕೆದಂಬಾಡಿ ರಾಮ ಗೌಡ. ಅವನಿಗೆ ಸಹಾಯಕನಾಗಿರಬೇಕಾದ್ದು ಮಣಿಯನ ಸುಬ್ರಾಯಗೌಡ, ದೇರಾಜೆ ಬಚ್ಚ, ಗುಡ್ಡದ ಸುಬ್ಬಯ್ಯ, ಮಡ್ಯಾಲ ತಿಮ್ಮ ಮುಂತಾದವರು. ಈ ಪ್ರಧಾನ ತಂಡದಲ್ಲಿ ಸುಮಾರು ೫೦೦ ಮಂದಿ ಹೋರಾಟಗಾರರಿದ್ದರು.

ಎರಡನೆಯ ತಂಡಕ್ಕೆ ಕೂಜುಗೋಡು ಅಪ್ಪಯ್ಯಗೌಡ, ಅಮ್ಮೆ ಮಲ್ಲಪ್ಪ ಗೌಡ ಮತ್ತು ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ನಾಯಕರಾಗಿದ್ದರು. ಇವರು ಬಿಸಿಲೆ ಘಾಟಿಯ ಮೂಲಕ ಕೂಡು ರಸ್ತೆ ತಲುಪಿ ಏಪ್ರಿಲ್ ೫ ರಂದು ಮಡಿಕೇರಿಯನ್ನು ವಶಪಡಿಸಿಕೊಳ್ಳಬೇಕು. ಈ ತಂಡದಲ್ಲಿಯೂ ಸುಮಾರು ೫೦೦ ಜನ ಹೋರಾಟಗಾರರಿದ್ದರು.

ಮೂರನೆಯ ತಂಡ ಕುಡೆಕಲ್ಲು ಪುಟ್ಟ ಮತ್ತು ಕುಂಚಡ್ಕ ರಾಮ ಅವರ ನೇತೃತ್ವದಲ್ಲಿ ವಿಟ್ಲ ಮಾರ್ಗವಾಗಿ ಕಾಸರಗೋಡಿಗೆ ಹೋಗಿ ಕುಂಬಳೆ, ಮಂಜೇಶ್ವರದ ಮೂಲಕ ಏಪ್ರಿಲ್ ೫ ರಂದು ಮಂಗಳೂರು ತಲುಪಬೇಕು. ಇವರಿಗೆ ಆ ಭಾಗದ ನಾಯಕ ಹಾಗೂ ಬಂಡಾಯದ ಪ್ರಮುಖ ಸಂಘಟಕ ಚೆರಂಜಿ ಸುಬ್ರಾಯ ಮಾರ್ಗದರ್ಶಕನಾಗಿರುತ್ತಾನೆ. ಈ ಗುಂಪಿನಲ್ಲಿ ಸುಮಾರು ೨೦೦ ಜನರಿದ್ದರು.

## ಘೋಷಣೆಗೆ ಪ್ರತಿಕ್ರಿಯೆ

ಕಲ್ಯಾಣಸ್ವಾಮಿಯು ತನಗೆ ಬೆಂಬಲ ಕೊಡುವಂತೆ ಹೊರಡಿಸಿದ ಘೋಷಣೆಗೆ ಪ್ರತಿಕ್ರಿಯೆಯಾಗಿ ಚೆಂಬು, ಪೆರಾಜೆಯ ರೈತರು ಆಯುಧಗಳನ್ನು ಹಿಡಿದುಕೊಂಡು ಬಂದು ಬೆಳ್ಳಾರೆಯಲ್ಲಿ ಕಲ್ಯಾಣಸ್ವಾಮಿಯೊಂದಿಗೆ ಸೇರಿಕೊಂಡರು. ಕೊಡಗಿನ ತಾವುನಾಡು, ಬೆಂಗುನಾಡುಗಳಿಂದಲೂ ರೈತರು ಕಲ್ಯಾಣಸ್ವಾಮಿಯನ್ನು ಕೂಡಿಕೊಳ್ಳಲೆಂದು ಹೊರಟರು. ಆದರೆ ಅಷ್ಟರಲ್ಲಿ ನಾಲ್ಕುನಾಡಿನ ಸುಬೇದಾರ್ ಮಾದಯ್ಯ ಕೆಲವು ಕೊಡವರೊಂದಿಗೆ ಹೋಗಿ ಬೆಳ್ಳಾರೆಗೆ ಹೊರಟಿದ್ದ ರೈತರನ್ನು ತಡೆದರು. ಕಲ್ಯಾಣಸ್ವಾಮಿಯ ಪಡೆ ಮಡಿಕೇರಿಗೆ ಬರುತ್ತದೆ ಎಂಬುದನ್ನು ತಿಳಿದು ಮಡಿಕೇರಿಯ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್

ಲೀ ಹಾರ್ಡಿ ತಕ್ಷಣವೇ ಕೆಲವು ಸೈನಿಕರನ್ನು, ಬೋಪು ದಿವಾನರೊಂದಿಗೆ ಆಯುಧಗಳ ಸಹಿತ ಸೋಮವಾರಪೇಟೆಯ ಕಡೆಗೆ ಕಳಿಸಿದನು.

## ಪುತ್ತೂರಿನ ವಶ

ಯೋಜಿಸಿದಂತೆ ಬೆಳ್ಳಾರೆಯಿಂದ ಹೋರಾಟಗಾರರು ಪುತ್ತೂರಿಗೆ ಹೊರಟರು. ಮಾರ್ಗ ಮಧ್ಯದಲ್ಲಿ ಧನಿಕರೊಬ್ಬರಿಗೆ ಸೇರಿದ್ದ ಕೆಲವು ಆನೆಗಳನ್ನು ಬಲವಂತವಾಗಿ ವಶಪಡಿಸಿಕೊಂಡು ಕಲ್ಯಾಣಸ್ವಾಮಿಯ ಶಿಬಿರಕ್ಕೆ ತಂದರು. ಬ್ರಿಟಿಷ್ ಅಧಿಕಾರಿಗೆ ಸೇರಿದ್ದ ಏಳೆಂಟು ಕುದುರೆಗಳನ್ನು ಜನರೇ ಹಿಡಿದು ತಂದು ಕಲ್ಯಾಣಸ್ವಾಮಿಗೆ ಕೊಟ್ಟರು. ಕೆದಂಬಾಡಿ ರಾಮಗೌಡನು ಈಗ ರಾಜನಾಗಿದ್ದ ಕಲ್ಯಾಣಸ್ವಾಮಿಗೆ ಒಂದು ಕುರ್ಚಿ ಮತ್ತು ಒಂದು ರೇಷ್ಮೆಯ ಕೊಡೆಯನ್ನು ಕೊಟ್ಟಿದ್ದನು. ಉಪ್ಪಿನಂಗಡಿ ಜೈನ ಶೆಟ್ಟಿಯೊಬ್ಬರು ಕಲ್ಯಾಣಸ್ವಾಮಿಗೆ ಒಂದು ಬಿಳಿ ಬಣ್ಣದ ನಿಲುವಂಗಿ ಮತ್ತು ಕೆಂಪು ಬಣ್ಣದ ರೇಷ್ಮೆಯ ಅಂಗವಸ್ತ್ರವನ್ನೂ ಕೊಟ್ಟಿದ್ದರು. ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಎರಡು ಫಿರಂಗಿಗಳನ್ನು ಹೋರಾಟಗಾರರಿಗೆ ಕೊಟ್ಟಿದ್ದರು. ಅವುಗಳನ್ನು ಮಂಗಳೂರು ಗೆದ್ದುಕೊಳ್ಳಲು ಬಳಸಲಾಯಿತು. ಪುತ್ತೂರಿನಲ್ಲಿ ಹೋರಾಟಗಾರರೊಂದಿಗೆ ಬೆಳ್ತಂಗಡಿ, ಉಪ್ಪಿನಂಗಡಿ ಕಡೆಯ ರೈತರು ಸೇರಿಕೊಂಡು ತಮ್ಮ ಬೆಂಬಲ ಸೂಚಿಸಿದರು. ಉಪ್ಪಿನಂಗಡಿಯ ಸರಕಾರೀ ಕಚೇರಿಯಲ್ಲಿ ಜವಾನನಾಗಿದ್ದ ಮಂಜ ಎಂಬುವನು ತನ್ನ ಉದ್ಯೋಗ ತ್ಯಜಿಸಿ ಹೋರಾಟಗಾರರೊಂದಿಗೆ ಸೇರಿಕೊಂಡನು. ಹೀಗೆ ಹೋರಾಟಗಾರರಿಗೆ ವಿವಿಧೆಡೆಗಳಿಂದ ಸಾಕಷ್ಟು ಬೆಂಬಲ ಸಿಕ್ಕಿತ್ತು.

ಹೋರಾಟಗಾರರು ಹೆಚ್ಚು ಕಷ್ಟವಿಲ್ಲದೇ ಪುತ್ತೂರನ್ನು ವಶಪಡಿಸಿಕೊಂಡರು. ಕರಣಿಕ ದೇವಪ್ಪ ಎಂಬವನನ್ನು ಬಿಟ್ಟರೆ, ಪುತ್ತೂರಿನಲ್ಲಿ ಉಳಿದವರಿಂದ ಹೆಚ್ಚು ತೊಂದರೆಗಳು ಬರಲಿಲ್ಲ. ಮಂಗಳೂರಿನಿಂದ ಪುತ್ತೂರಿಗೆ ಕಳುಹಿಸಲ್ಪಟ್ಟ ಕ್ಯಾಂಪ್ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಆಳುಗಳ ಮತ್ತು ಸಿಪಾಯಿಗಳ ಮೇಲೆರಗಿದ ಹೋರಾಟಗಾರರು ಅವರಿಂದ ವಸ್ತುಗಳನ್ನು ವಶಪಡಿಸಿಕೊಂಡು 'ನಾವು ನಿಮ್ಮ ಸ್ನೇಹಿತರು. ನಿಮ್ಮೊಡನೆ ಯುದ್ಧ ಮಾಡುವುದಿಲ್ಲ. ನಾವು ಇಂಗ್ಲಿಷರನ್ನು ವಿರೋಧಿಸುತ್ತೇವೆ, ಹೊಡೆದಟ್ಟುತ್ತೇವೆ' ಎಂದು ಹೇಳಿರುವುದು ದಾಖಲಾಗಿದೆ.



ಪುತ್ತೂರನ್ನು ರಕ್ಷಿಸುವ ಜವಾಬ್ದಾರಿ ಆಗ ಮಂಗಳೂರಿನ ಕಲೆಕ್ಟರ್ ಆಗಿದ್ದ ಲೆವಿನ್ ಅವನದಾಗಿತ್ತು. ಬಂಡಾಯಗಾರರು ಬೆಳ್ಳಾರೆಯಿಂದ ಪುತ್ತೂರು ಕಡೆಗೆ ಹೊರಟಿರುವುದರ ಬಗ್ಗೆ ಆತನಲ್ಲಿ ಯಾವ ಪೂರ್ವ ಸೂಚನೆಯೂ ಇರಲಿಲ್ಲ. ೩೦ ಮಾರ್ಚ್ ೧೮೩೭ ರಂದು ರಾತ್ರಿ ೧೧ ಗಂಟೆಗೆ ಬಂಟ್ವಾಳದ ಶಿರಸ್ತೇದಾರ ಲೆವಿನ್‌ಗೆ ಬೆಳ್ಳಾರೆಯಲ್ಲಿ ಸುಮಾರು ೨೦೦೦ ಜನರು ಶಸ್ತ್ರಧಾರಿಗಳಾಗಿ ಸೇರಿದ್ದಾರೆ. ಶಿರಸ್ತೇದಾರ, ತಹಶೀಲ್ದಾರ ಮತ್ತಿತರೇ ಉದ್ಯೋಗಿಗಳನ್ನು ಸೆರೆ ಹಿಡಿದಿದ್ದಾರೆ ಎಂದು ವರದಿ ಮಾಡಿದನು. ತಮ್ಮ ವಿರುದ್ಧ ದಂಗೆಯೊಂದು ಆರಂಭಗೊಂಡಿದೆಯೆಂಬ ವಿಚಾರ ತಿಳಿದ ತಕ್ಷಣ ಲೆವಿನ್ ಮೇಜರ್ ಡೌಕರ್‌ಗೆ ಪತ್ರ ಬರೆದು ೩೧೦ ಸೈನಿಕರನ್ನು ಪುತ್ತೂರಿಗೆ ಕಳಿಸಲು ಕೋರುತ್ತಾನೆ. ಡೌಕರ್ ೧೫೧ ಸೈನಿಕರೊಂದಿಗೆ ಬಂದನು. ಆತನ ಸಹಾಯಕ ಲಶಿಂಗ್‌ಟನ್‌ನ ತುಕಡಿ ಸಹ ಜೊತೆಗಿತ್ತು. ಆದರೆ ಯುದ್ಧ ಮಾಡಲು ಅವರಿಗೆ ಧೈರ್ಯ ಸಾಲದಾಯಿತು. ಲೆವಿನ್ ಪ್ರಕಾರ ಪುತ್ತೂರಿನಲ್ಲಿದ್ದ ಹೋರಾಟಗಾರರ ಸಂಖ್ಯೆ ಅಂದಾಜು ೧೨೦೦. ಬ್ರಿಟಿಷ್ ಊಳಿಗದ ಪಟೇಲರು, ಶ್ಯಾನುಭೋಗರು ಸೇರಿದಂತೆ ಇಡೀ ನಾಡೇ ಹೋರಾಟಗಾರರ ಪರ ಇತ್ತು. ಪುತ್ತೂರಲ್ಲಿ ಕಂಪೆನಿ ಕಚೇರಿ ಸುಲಭವಾಗಿ ಹೋರಾಟಗಾರರ ವಶಕ್ಕೆ ಬಂತು. ಅಲ್ಲಿನ ಉದ್ಯೋಗಿಗಳು ಬಂಧನಕ್ಕೊಳಗಾದರು. ಎರಡು ದಿನ ದೂರದಲ್ಲಿದ್ದು ಹೊಂಚು ಹಾಕಿದ ಲೆವಿನ್ ಯುದ್ಧ ನಡೆಸಿದರೆ ತನಗೇ ಅಪಾಯ ಎಂದು ತಿಳಿದು ಏಪ್ರಿಲ್ ೨ನೇ ರಾತ್ರಿ ಅಲ್ಲಿಂದ ಮಂಗಳೂರಿಗೆ ಪಲಾಯನ ಮಾಡಿದ, ಮಂಗಳೂರನ್ನು ರಕ್ಷಿಸುವ ಕೆಲಸದಲ್ಲಿ ತೊಡಗಿಸಿಕೊಂಡ. ಅದರ ಮೊದಲ ಸಿದ್ಧತೆಯಾಗಿ ಆತ ಧಾರವಾಡದ ಮುಖ್ಯ ಕಲೆಕ್ಟರನಿಗೆ ೫೦೦ ಸೈನಿಕರನ್ನು ಮತ್ತು ಕಣ್ಣಾನೂರಿನ ಕಲೆಕ್ಟರನಾದ ಏಲನ್‌ಗೆ ೩೦೦ ಸೈನಿಕರನ್ನು ಮಂಗಳೂರಿಗೆ ಕಳುಹಿಸಿಕೊಡಲು ಪತ್ರ ಬರೆಯುತ್ತಾನೆ.

## ಮೂರು ತಂಡಗಳಾಗಿ ಹೋರಾಟ

ಪುತ್ತೂರು ಹೋರಾಟಗಾರರ ವಶವಾಗುತ್ತಿದ್ದಂತೆಯೇ ಹಿಂದೆ ಅವರೇ ಬೆಳ್ಳಾರೆಯಲ್ಲಿ ಯೋಜಿಸಿದ ಪ್ರಕಾರ ಮೂರು ತಂಡಗಳು ಮೂರು ದಿಕ್ಕಿನತ್ತ ಪ್ರಯಾಣ ಬೆಳೆಸಿದವು.

ಪುತ್ತೂರಿನಿಂದ ಕಲ್ಯಾಣಸ್ವಾಮಿ ಮತ್ತು ಕೆದಂಬಾಡಿ ರಾಮಗೌಡನ ನೇತೃತ್ವದಲ್ಲಿ ಮಂಗಳೂರಿನ ಕಡೆ ಹೊರಟ ಪ್ರಧಾನ ತಂಡ ಮುಂದೆ ಪಾಣೆಮಂಗಳೂರು ಮತ್ತು ಬಂಟ್ವಾಳವನ್ನು ವಶಪಡಿಸಿಕೊಂಡಿತು. ಬಂಟ್ವಾಳವು ವ್ಯಾಪಾರಿ ಕೇಂದ್ರವಾಗಿದ್ದುದರಿಂದ, ಬ್ರಿಟಿಷರ ತೆರಿಗೆ ಮತ್ತು ಸುಂಕದ ನೀತಿಗಳು ವ್ಯಾಪಾರಿಗಳಿಗೆ ಅನುಕೂಲಕಾರಿಯಾಗಿ ಇದ್ದುದರಿಂದ ಕಲ್ಯಾಣಸ್ವಾಮಿಗೆ ಬಂಟ್ವಾಳದಲ್ಲಿ ಜನಬೆಂಬಲ ದೊರಕಲಿಲ್ಲ. ಬದಲಾಗಿ ಪಾಡಿ ಸುಬ್ಬಯ್ಯ, ರಂಗ ಬಾಳಿಗಾ ಅವರು ಬ್ರಿಟಿಷರನ್ನು ಬೆಂಬಲಿಸಿದರು. ಬೆಳ್ಳಾರೆಯಲ್ಲಿ ಕಲ್ಯಾಣಸ್ವಾಮಿ ಹೊರಡಿಸಿದ ಘೋಷಣೆಗಳಲ್ಲಿ ರೈತರಿಗೆ ಲಾಭದಾಯಕವಾದ ಅಂಶಗಳಿದ್ದುವೇ ವಿನಾ ವರ್ತಕರಿಗೆ ಲಾಭವಾಗುವಂಥ ಯಾವ ಅಂಶಗಳೂ ಇರಲಿಲ್ಲ. ಬಂಟ್ವಾಳವನ್ನು ವಶಪಡಿಸಿಕೊಂಡದ್ದು ೧೮೩೭ರ ಏಪ್ರಿಲ್ ೫ ರಂದು. ಈ ಹಂತದಲ್ಲಿ ಬಂಡಾಯಗಾರರು ಖಜಾನೆಗಳಿಂದ ೧೫,೦೦೦ ರೂಪಾಯಿಗಳನ್ನು ವಶಪಡಿಸಿಕೊಂಡರೆಂದು ವರದಿಗಳು ಹೇಳುತ್ತವೆ.

ಪುತ್ತೂರಿನಿಂದ ಮಂಗಳೂರಿಗೆ ಹೋಗುವ ದಾರಿಯಲ್ಲಿ ಲೆವಿನ್ ೧೫ ಮಂದಿ ಪೇದೆಗಳನ್ನು ಮತ್ತು ಬ್ರಿಟಿಷ್ ಅಧಿಕಾರಿ ವೈಟ್ ೬ ಮಂದಿ ಪೇದೆಗಳನ್ನು ಒಟ್ಟು ಸೇರಿಸಿ ಬಂದೂಕು ಮತ್ತು ಮದ್ದುಗುಂಡುಗಳನ್ನು ಕೊಡುತ್ತಾರೆ. ಅವರು ತಮಗೆ ಕೊಟ್ಟ ಕೆಲಸವನ್ನು ನಿರ್ವಹಿಸುವ ಬದಲು ಯಾರಿಗೂ ಹೇಳದೆ ನಾಪತ್ತೆಯಾದರು. ಲೆವಿನ್ ಮಂಗಳೂರು ತಲುಪುವ ಹೊತ್ತಿಗೆ ಊರು ನಿರ್ಜನವಾಗಿತ್ತು. ಅಲ್ಲಿನ ಜನ ಬಂಡಾಯಗಾರರೊಂದಿಗೆ ಸಂಪರ್ಕದಲ್ಲಿರುವುದು ಅವರ ಗಮನಕ್ಕೆ ಬಂದಿತು. ನಗರದ ಕಾವಲು ಪಡೆ ಕೂಡ ಅವರೊಂದಿಗೆ ಸೇರಿಕೊಂಡಿತ್ತು.

ಕ್ರಾಂತಿ ಪಡೆ ಬ್ರಿಟಿಷರ ತಿಜೋರಿ ಮತ್ತು ಅಂಚೆ ವ್ಯವಸ್ಥೆಯನ್ನು ಹಾಳು ಮಾಡುತ್ತ ಸಾಗಿತು. ಯಾರನ್ನೂ ದೋಚಲಿಲ್ಲ. ಜನರ ಆಸ್ತಿ, ಮಾನ, ಪ್ರಾಣಗಳಿಗೆ ಹಾನಿಯುಂಟುಮಾಡಲಿಲ್ಲ. ಆದುದರಿಂದ ಕ್ರಾಂತಿ ಪಡೆಗೆ ಎಲ್ಲಾ ಕಡೆಗಳಲ್ಲಿ ಭವ್ಯ ಸ್ವಾಗತ ದೊರೆಯಿತು. ಕೆನರಾದ ಉತ್ತರ ಭಾಗದ ಹೊನ್ನಾವರ, ಕುಮಟಾ ಮೊದಲಾದ ಕಡೆಗಳಲ್ಲೂ ರೈತರು ಬ್ರಿಟಿಷರ ವಿರುದ್ಧ ದಂಗೆಯೆದ್ದರು.

ಈ ಸಮಯದಲ್ಲಿ ನಂದಾವರದ ಲಕ್ಷ್ಮಪ್ಪ ಬಂಗರಸ ತನ್ನ ಸೇನೆಯೊಂದಿಗೆ ಕಲ್ಯಾಣಸ್ವಾಮಿಯನ್ನು ಸೇರಿಕೊಳ್ಳುತ್ತಾನೆ. ಬಂಗವಾಡಿಯ ಬಂಗ ಅರಸರ



ಕುಟುಂಬಕ್ಕೆ ಸೇರಿದ ಲಕ್ಷ್ಮಪ್ಪನಿಗೆ ಆ ಪ್ರದೇಶದಲ್ಲಿ ಜನಮನ್ನಣೆ ಇರುತ್ತದೆ. ಕರಾವಳಿಯನ್ನು ತಮ್ಮದಾಗಿಸಿಕೊಂಡ ನಂತರ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಲಕ್ಷ್ಮಪ್ಪ ಬಂಗರಸನಿಗೆ ಅತೀ ಚಿಕ್ಕ ಮೊತ್ತದ ನಿವೃತ್ತಿ ವೇತನವನ್ನು ನೀಡುತ್ತಿತ್ತು. ಈ ಮೊತ್ತದ ಬಗ್ಗೆ ಅತೃಪ್ತಿ, ತಕರಾರುಗಳು ಇದ್ದವು. ಕಲ್ಯಾಣಸ್ವಾಮಿಯನ್ನು ಬೆಂಬಲಿಸಿದರೆ ತನ್ನ ಆಳ್ವಿಕೆಯನ್ನು ಮರು ಸ್ಥಾಪಿಸಬಹುದೆಂದು ಲಕ್ಷ್ಮಪ್ಪ ಬಂಗರಸನು ಯೋಚಿಸಿದ್ದನು. ಆತನು ತನ್ನ ಒಂದು ಫಿರಂಗಿಯನ್ನು ಬಂಡಾಯಗಾರರಿಗೆ ಕೊಟ್ಟಿದ್ದನು. ಸಿಡಿಮದ್ದನ್ನೂ ನೀಡಿದ್ದನು. ಮೂಡುಬಿದಿರೆಯ ಹಳೆಯ ಅರಸನಾದ ಚೌಟ ವಂಶದ ಚಂದ್ರಶೇಖರ ಚೌಟರು ಕಲ್ಯಾಣಸ್ವಾಮಿಗೆ ಹೋರಾಟದಲ್ಲಿ ಸಹಾಯ ಮಾಡಲು ಜನರನ್ನು ಕಳಿಸಿದ್ದನು. ಕುಂಬಳೆಯ ಸುಬ್ರಾಯ ಹೆಗ್ಡೆ ಮತ್ತು ತೆಂಕು ಕುಂಬಳೆ ಕೋಟೆಯ ಚೀರಂಜಿ ಸುಬ್ರಾಯ ಹೋರಾಟದ ಬೆಂಬಲಿಗರಾಗಿದ್ದರು. ಚೀರಂಜಿ ಸುಬ್ರಾಯ ಹೋರಾಡುತ್ತಾ ಮೃತರಾದರು.

ಕಾಸರಗೋಡಿಗೆ ಹೋದ ಎರಡನೆಯ ತಂಡ ಯಶಸ್ಸನ್ನು ಕಂಡಿದೆ. ಪುತ್ತೂರಿನಿಂದ ಹೊರಟಾಗ ಇನ್ನೂರು ಜನರಿದ್ದ ಈ ತಂಡ ಕಾಸರಗೋಡನ್ನು ತಲುಪಿದಾಗ ಅದರ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚಾಗಿತ್ತು.

ಥಾಮಸ್ ಮನ್ರೋ ಜಾರಿಗೆ ತಂದ ರೈತ ಕಾನೂನುಗಳು ಮತ್ತು ಕಂದಾಯ ಪದ್ಧತಿಯಿಂದ ತೊಂದರೆಗೊಳಗಾಗಿದ್ದ ವಿಟ್ಲದ ಅರಸರು ಹೋರಾಟಗಾರರನ್ನು ಬೆಂಬಲಿಸಿದರು. ಯೋಜಿಸಿದಂತೆಯೇ ೧೮೩೭ರ ಏಪ್ರಿಲ್ ೨ರಂದು ಕುಂಚಡ್ಕ ರಾಮ ಮತ್ತು ಕುಡೆಕಲ್ಲು ಪುಟ್ಟ ಅವರ ನೇತೃತ್ವದ ಈ ತಂಡವು ಕಾಸರಗೋಡನ್ನು ಗೆದ್ದಿತು. ಕಾಸರಗೋಡಿನಲ್ಲಿ ತಹಶೀಲ್ದಾರರ ಕಚೇರಿಯನ್ನು ವಶಪಡಿಸಿಕೊಂಡ ಹೋರಾಟಗಾರರು ಖಜಾನೆಯನ್ನು ಮತ್ತು ಸಾರ್ವಜನಿಕ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡರು. ಮಾತ್ರವಲ್ಲ ಹೋರಾಟಗಾರರು ತಮ್ಮ ಕಡೆಯವರನ್ನು ತಹಶೀಲ್ದಾರ ಮತ್ತು ಇತರ ಅಧಿಕಾರಿಗಳನ್ನಾಗಿ ನೇಮಿಸಿದರು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಕೆಲಸಗಾರರಾಗಿ ಇದ್ದವರಿಗೆ ಸಂಬಳ ಬಟವಾಡೆ ಮಾಡಿದರು. ಹೋರಾಟಗಾರರ ಸರಕಾರದ ನೌಕರನಾಗಿ ಕೆಲಸ ಮಾಡುವುದಾಗಿ ಅವರಿಂದ ಮುಚ್ಚಳಿಕೆಯನ್ನು ಬರೆಸಿಕೊಂಡರು. ಕಾಸರಗೋಡಿನಿಂದ ಮಂಗಳೂರು ಕಡೆ ತಿರುಗಿಕೊಂಡ

ಬಂಡಾಯಗಾರರು ಏಪ್ರಿಲ್ ೩ರಂದು ಕುಂಬಳೆಯನ್ನು ವಶಪಡಿಸಿಕೊಂಡಾಗ ಅಲ್ಲಿಯ ಸುಬ್ರಾಯ ಹೆಗ್ಗಡೆಯೂ ತನ್ನ ಜನರೊಡನೆ ಬಂಡಾಯಗಾರರನ್ನು ಸೇರಿಕೊಂಡರು. ಈ ಮಧ್ಯೆ ಕಾಸರಗೋಡು, ಬಿಸಲೆ, ಪಟ್ಟಿ ಮತ್ತಿತರ ದಾರಿಗಳ ಮೂಲಕ ನಡೆಯುತ್ತಿದ್ದ ಕಂಪೆನಿಯ ಟಪ್ಪಾಲು ವ್ಯವಸ್ಥೆಯನ್ನು ವಿಫಲಗೊಳಿಸಲಾಗಿತ್ತು. ಬಂಡಾಯಗಾರರು ಪ್ರತಿಯೊಂದು ಗಡಿಯಲ್ಲಿಯೂ ಕಾವಲು ಪಡೆಯನ್ನು ಇರಿಸಿದ್ದರು. ಏಪ್ರಿಲ್ ೪ರಂದು ರೈತಸೈನ್ಯ ಮಂಜೇಶ್ವರ ತಲುಪಿತು. ಮರುದಿನ ಅಂದರೆ ಏಪ್ರಿಲ್ ೫ರಂದು ನಿಗದಿಪಡಿಸಿದ ರೀತಿಯಲ್ಲಿಯೇ ಮಂಗಳೂರು ಮುಟ್ಟಿದ ಅವರು ಪುತ್ತೂರಿನಿಂದ ಆಗಮಿಸಿದ ತಂಡವನ್ನು ಸೇರಿಕೊಂಡರು. ಕುಂಬಳೆಯನ್ನು ವಶಪಡಿಸಿಕೊಂಡಾಗ ಅಲ್ಲಿಯ ಸುಬ್ರಾಯ ಹೆಗ್ಗಡೆಯೂ ತನ್ನ ಜನರೊಡನೆ ಬಂಡಾಯಗಾರರನ್ನು ಸೇರಿಕೊಂಡರು.

### ಮಂಗಳೂರು ವಶ

ಇತ್ತ ಕಲ್ಯಾಣಸ್ವಾಮಿಯು ಮಂಗಳೂರನ್ನು ವಶಪಡಿಸಿಕೊಳ್ಳುವುದು ಅಷ್ಟು ಸುಲಭವಲ್ಲವಾದುದರಿಂದ, ಬಂಟ್ವಾಳದಿಂದ ಕಲ್ಯಾಣಸ್ವಾಮಿಯ ಕರಣಿಕ ಸುಬ್ಬಯ್ಯನ ಮೂಲಕ ಮಂಗಳೂರಿನ ನಾಗರಿಕರಿಗೆ ಒಂದು ಪತ್ರ ಬರೆಯಿಸಿದನು. ಪತ್ರದಲ್ಲಿ ಕಲ್ಯಾಣಸ್ವಾಮಿಯು '೧೨ ಲಕ್ಷ ಜನರಿರುವ ತನ್ನ ದಂಡು ಶೀಘ್ರದಲ್ಲೇ ಮಂಗಳೂರು ತಲುಪುವುದು ಎಂದೂ, ಬ್ರಿಟಿಷರ ವಿರುದ್ಧದ ಈ ಹೋರಾಟದಲ್ಲಿ ಮಂಗಳೂರಿನ ನಿವಾಸಿಗಳು ತನ್ನೊಂದಿಗೆ ಸೇರಿಕೊಳ್ಳಬೇಕೆಂದೂ' ಜನರನ್ನು ವಿನಂತಿಸಿಕೊಳ್ಳುತ್ತಾನೆ. ಈ ಪತ್ರದ ಉದ್ದೇಶ ಮಂಗಳೂರಿನ ಜನರನ್ನು ಹೆದರಿಸಲಿಕ್ಕಾಗಿ ಇರಬಹುದು ಇಲ್ಲವೇ ೧೨ ಸಾವಿರವನ್ನು ಬರೆಯುವಾಗ ಆಕಸ್ಮಿಕವಾಗಿ ೧೨ ಲಕ್ಷವಾಗಿ ನಮೂದಾಗಿರಬಹುದಾದ ಸಾಧ್ಯತೆ ಇದೆ. ಲೆವಿನ್ ವರದಿಯ ಪ್ರಕಾರ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಆಗಿನ ಜನಸಂಖ್ಯೆ ಸುಮಾರು ೪೫,೦೦೦.

೫ ಏಪ್ರಿಲ್ ೧೮೩೭ ರಂದು ಕಲ್ಯಾಣಸ್ವಾಮಿಯ ದಂಡು ಮಂಗಳೂರನ್ನು ಪ್ರವೇಶಿಸಿತು. ಪುತ್ತೂರಿನಿಂದ ಮಂಗಳೂರಿಗೆ ಹೋಗುವ ದಾರಿಯಲ್ಲಿ ಲೆವಿನ್ ೧೫ ಮಂದಿ ಪೇದೆಗಳನ್ನು ಮತ್ತು ಬ್ರಿಟಿಷ್ ಅಧಿಕಾರಿ ವೈಟ್ ೬ ಮಂದಿ ಪೇದೆಗಳನ್ನು ಒಟ್ಟು ಸೇರಿಸಿ ಬಂದೂಕು ಮತ್ತು ಮದ್ದುಗುಂಡುಗಳನ್ನು ಕೊಟ್ಟರೂ ಅವರು ತಮಗೆ ಕೊಟ್ಟ ಕೆಲಸವನ್ನು ನಿರ್ವಹಿಸುವ ಬದಲು ಯಾರಿಗೂ ಹೇಳದೆ ನಾಪತ್ತೆಯಾದರು. ಲೆವಿನ್ ಮಂಗಳೂರು ತಲುಪುವ ಹೊತ್ತಿಗೆ ಊರು ನಿರ್ಜನವಾಗಿತ್ತು. ನಗರದ ಕಾವಲು ಪಡೆಯು ಹೋರಾಟಗಾರರೊಂದಿಗೆ ಸೇರಿಕೊಂಡಿತು. ವ್ಯಾಪಾರಿಗಳು ತಮ್ಮ ನಿಷ್ಠೆಯನ್ನು ಬದಲಿಸಿ ಇವರೊಂದಿಗೆ ಕೈಜೋಡಿಸಿದರು. ಲೈಟ್‌ಹೌಸ್ ಪ್ರದೇಶದ ಬ್ರಿಟಿಷ್ ಬಂಗಲೆಗಳಿಗೆ ಬೆಂಕಿ ಹಚ್ಚಲಾಯಿತು. ಸರಕಾರಿ ಖಜಾನೆಯನ್ನು ಲೂಟಿ ಮಾಡಲಾಯಿತು. ಜೈಲಿಗೆ ನುಗ್ಗಿ ಖೈದಿಗಳನ್ನು ಬಿಡುಗಡೆ ಮಾಡಿ ಹೋರಾಟಗಾರರು ತಮ್ಮ ದಂಡಿಗೆ ಅವರನ್ನೂ ಸೇರಿಸಿಕೊಂಡರು. ಮಂಗಳೂರನ್ನು ರಕ್ಷಿಸುತ್ತಿದ್ದ ಎರಡನೆಯ ರೆಜಿಮೆಂಟಿನ ಸೈನಿಕರನ್ನು ಹೋರಾಟಗಾರರು ಸೋಲಿಸಿದರು.

ಏಪ್ರಿಲ್ ೫ ರಂದು ಸಾಯಂಕಾಲ ಹೋರಾಟಗಾರರು ಕಲೆಕ್ಟರನ ಕಚೇರಿಯಲ್ಲಿ ಹಾರಾಡುತ್ತಿದ್ದ ಬ್ರಿಟಿಷರ ಬಾವುಟವನ್ನು ಕೆಳಕ್ಕೆ ಇಳಿಸಿ, ಹಾಲೇರಿ ರಾಜಲಾಂಛನದ ಬಾವುಟವನ್ನು ಹಾರಿಸಿದರು. ಇಂದು ಆ ಸ್ಥಳವು 'ಬಾವುಟಗುಡ್ಡೆ' ಎಂದು ಪ್ರಸಿದ್ಧವಾಗಿದೆ. ಅದೇ ದಿನ ಪಣಂಬೂರು ಮತ್ತು ಮುಲ್ಕಿ ಪ್ರದೇಶಗಳು ಹೋರಾಟಗಾರರ ಕೈವಶವಾದುವು. ಕಾರ್ಕಳ ಮತ್ತು ಮೂಡಬಿದಿರೆ ಕಡೆಯಿಂದಲೂ ಕಲ್ಯಾಣಸ್ವಾಮಿಗೆ ಹೆಚ್ಚಿನ ಬೆಂಬಲ ದೊರಕಿತು. ಒಂದೆಡೆ ಬಂಡಾಯಗಾರರೊಂದಿಗೆ ಕಾದಾಡುತ್ತಾ, ಇನ್ನೊಂದೆಡೆ ಯುರೋಪಿನ ಕುಟುಂಬಗಳನ್ನು ಮಂಗಳೂರಿನಿಂದ ತೆರವು ಮಾಡಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಲು ಕಂಪೆನಿಯ ಅಧಿಕಾರಿಗಳು ತೀರ್ಮಾನಿಸಿದರು. ಏಪ್ರಿಲ್ ೫ ರಂದು ಅವರನ್ನು ಹಡಗಿಗೆ ಹತ್ತಿಸಲು ನಿರ್ಧರಿಸಿದ್ದರೂ ಅದು ಸಾಧ್ಯವಾಗಲಿಲ್ಲ. ಈ ನಡುವೆ ಖಜಾನೆಯನ್ನು ರಕ್ಷಿಸುವ ಪ್ರಯತ್ನದಿಂದ ಅವರ ಕೆಲಸಕ್ಕೂ ಅಡಚಣೆಯಾಯಿತು. ಏಪ್ರಿಲ್ ೬ ಮತ್ತು ೭ ರಂದು ಒಂದಷ್ಟು ಜನ ಮಂಗಳೂರು ತೊರೆದು ಕಣ್ಣಾನೂರಿಗೆ ಓಡಿಹೋದರು. ಹೀಗೆ ಮಂಗಳೂರಿನ ಅಧಿಕಾರ ಕಲ್ಯಾಣಸ್ವಾಮಿಗೆ ಸಿಕ್ಕಿತು.

ದಂಗೆಯ ಪ್ರಮುಖರನ್ನು ಹಿಡಿದುಕೊಟ್ಟವರಿಗೆ ೫೦೦ ಮತ್ತು ೧೦೦೦ ರೂಪಾಯಿಗಳ ಬಹುಮಾನ ಕೊಡಲಾಗುವುದೆಂದು ಲೆವಿನ್ ಘೋಷಿಸುತ್ತಾನೆ. ಆದರೆ ಅವನ ಘೋಷಣೆಗೆ ಯಾರೂ ಬೆಲೆ ಕೊಡುವುದಿಲ್ಲ. ಏಪ್ರಿಲ್ ೬ನೇ

ತಾರೀಕಿನಂದು ಹೊನ್ನಾವರದಿಂದ ಲೆ. ಬ್ಲೇಕ್‌ನ ಮುಂದಾಳುತನದಲ್ಲಿ ಆಗಮಿಸಿದ ಸೈನಿಕರು ಜನತಾ ಬಂಡಾಯವು ಜಿಲ್ಲೆಯ ಉತ್ತರದ ಕಡೆ ಚಾಚಿಕೊಳ್ಳದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು. ಮುಂದಿನ ಹದಿಮೂರು ದಿನಗಳವರೆಗೆ, ಅಂದರೆ ಏಪ್ರಿಲ್ ೧೯ ರವರೆಗೆ ಮಂಗಳೂರು ಕಲ್ಯಾಣಸ್ವಾಮಿಯ ವಶವಾಗಿತ್ತು. ಬ್ರಿಟಿಷರಿಗೆ ಹಿನ್ನಡೆ ಆಗಿತ್ತು. ಆ ಕಾಲಕ್ಕೆ ಇದು ದೊಡ್ಡ ಸಂಗತಿ.

ಲೆವಿನ್ ಕೂಡಾ ತನ್ನ ವರದಿಯಲ್ಲಿ 'ನಾವು ಇದಿರಿಸಬೇಕಾದ್ದು ನಕಲಿ ಉತ್ತರಾಧಿಕಾರಿಯನ್ನು ಮಾತ್ರ ಅಲ್ಲ. ಊರಿನ ಜನರು ಮತ್ತು ನೆರೆಕರೆಯವರು ಅವನ ಜೊತೆ ಇದ್ದಾರೆ. ಸರಕಾರೀ ನೌಕರರೂ ಸೇರಿದ್ದಾರೆ. ಪಟೇಲರು ಮತ್ತು ಶಾನುಭೋಗರ ಪೈಕಿ ಒಬ್ಬನೇ ಒಬ್ಬ ನಮ್ಮ ಕಡೆ ಬರುತ್ತಿಲ್ಲ' ಎಂದು ಬರೆಯುತ್ತಾನೆ. ಮಂಗಳೂರನ್ನು ಕೇಂದ್ರವಾಗಿರಿಸಿಕೊಂಡು ೧೩ ದಿನಗಳ ಕಾಲ ಆಳ್ವಿಕೆ ನಡೆಸಿದ ಕಲ್ಯಾಣಸ್ವಾಮಿಯು ಈ ಅವಧಿಯಲ್ಲಿ ಉಪ್ಪು ಮತ್ತು ಹೊಗೆಸೊಪ್ಪಿನ ಬೆಲೆಯನ್ನು ಕಡಿಮೆ ಮಾಡಿದ. ಅದು ಜನರ ಮೆಚ್ಚುಗೆಗೆ ಕಾರಣವಾಗಿದೆ.

## ಸೋಲು

ಮಂಗಳೂರು ಮತ್ತು ಕಾಸರಗೋಡುಗಳಲ್ಲಿ ಹೋರಾಟಗಾರರು ಕಾರ್ಯಾಚರಣೆಯಲ್ಲಿದ್ದ ಸಮಯದಲ್ಲೆ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ, ಕೂಜುಗೋಡು ಅಪ್ಪಯ್ಯಗೌಡ ಮತ್ತು ಮಲ್ಲಪ್ಪಗೌಡ ಇವರ ಮುಂದಾಳುತನದಲ್ಲಿ ಎರಡನೆಯ ತಂಡ ಬಿಸಿಲೆ ಘಾಟಿಯ ಮೂಲಕ ಮಡಿಕೇರಿಯ ಕಡೆ ಸಾಗಿತು. ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಕೊಡಗಿನ ರಾಜರ ಆಡಳಿತದಲ್ಲಿ ಉದ್ಯೋಗದಲ್ಲಿದ್ದ. ಗುಡ್ಡೆಮನೆ ಅಪ್ಪಯ್ಯಗೌಡ ತಾನು ಮೇಲ್ಕೊಡಗಿಗೆ ಹೋಗಿ ಮಡಿಕೇರಿಗೆ ಮುತ್ತಿಗೆ ಹಾಕಲು ಜನರನ್ನು ಒಟ್ಟು ಸೇರಿಸುತ್ತೇನೆಂದು ಹೇಳಿದ. ಅದರಂತೆ ಪಾಡಿ ನಾಲ್ಕುನಾಡಿನ ಸುಬೇದಾರ ನೆರಪಂಡ ಮಾದಯ್ಯನ ಅನುಯಾಯಿಗಳನ್ನು ಕಂಡು ಅವರನ್ನು ಕರೆದುಕೊಂಡು ಕೂಜುಗೋಡು ತಂಡವನ್ನು ಸೇರಿಕೊಳ್ಳಲು ತೆರಳಿದ. ಅವರು ಮೊದಲು ಕೊಡಗಿನ ಸುಬೇದಾರ ಅಪ್ಪಚ್ಚುವನ್ನು ಸೆರೆಹಿಡಿದರು. ಆದರೆ ಅಷ್ಟು ಹೊತ್ತಿಗಾಗಲೇ ಮೇಜರ್ ಡ್ರಾಯರ್‌ನ ಬೆಟಾಲಿಯನ್ ಮಡಿಕೇರಿಯನ್ನು ತಲುಪಿಯಾಗಿತ್ತು. ಮಡಿಕೇರಿಯ ಉತ್ತರ ದಿಕ್ಕಿನ ಉಕ್ಕಡದ ಬಳಿ ಗುಂಡಿನ ಕಾಳಗ ನಡೆಯಿತು.



ಕನಿಷ್ಠ ನೂರು ಸುತ್ತಿನ ಗುಂಡು ಹಾರಾಟ ನಡೆದಿರುವ ಬಗ್ಗೆ ದಾಖಲಿಸಲಾಗಿದೆ. ಆದರೆ ಇವರ ಕಾದಾಟ ಯಶಸ್ವಿಯಾಗಲಿಲ್ಲ. ಗುಡ್ಡೆಮನೆ ಅಪ್ಪಯ್ಯಗೌಡ ಮತ್ತಿತರರ ಹೋರಾಟ ಗೆಲುವನ್ನು ತರಲಿಲ್ಲ. ದಿವಾನ ಅಪ್ಪಾರಂಡ ಬೋಪು ಮತ್ತು ದಿವಾನ ಚೆಪ್ಪುಡಿರ ಪೊನ್ನಪ್ಪ ಇವರ ಸೈನ್ಯ ಎರಡು ಕಡೆಯಿಂದ ದಾಳಿ ನಡೆಸಿತು. ಸಂಗ್ರಾಮದಲ್ಲಿ ಹೋರಾಟಗಾರರಿಗೆ ಸೋಲಾಯಿತು.

## ಹೋರಾಟದ ವೈಫಲ್ಯ

ಮಂಗಳೂರನ್ನು ಗೆದ್ದಾದ ಮೇಲೆ ಕೊಡಗನ್ನು ಗೆಲ್ಲುವುದು ಕಲ್ಯಾಣಸ್ವಾಮಿಯ ಯೋಜನೆಯಾಗಿತ್ತು. ೧೪ ಏಪ್ರಿಲ್ ೧೮೩೭ ರಂದು ಅವನು ಹೊರಡಿಸಿದ ಘೋಷಣೆಯಲ್ಲಿ 'ನೀವು ಮಡಿಕೇರಿಯಲ್ಲಿ ಇಂಗ್ಲಿಷ್ ಕಂಪೆನಿಯ ಮೇಲೆ ಆಕ್ರಮಣ ಮಾಡಿ ಕೋಟೆಯ ಮೇಲೆ ಧ್ವಜ ಹಾರಿಸಲು ನಿಷ್ಠಾವಂತರಾಗಿ ಕೆಲಸ ಮಾಡಿದರೆ ಮೂರು ವರ್ಷಗಳ ತೆರಿಗೆಯನ್ನು ರದ್ದು ಮಾಡಲಾಗುವುದು. ನೀವೆಲ್ಲರೂ ನನಗೆ ಮತ್ತು ನನ್ನ ಯೋಜನೆಗಳಿಗೆ ಬೆಂಬಲಿಸುವಂತೆ ಸೂಚಿಸಿದೆ' ಎನ್ನಲಾಗಿದೆ. ಆದರೆ ಕಲ್ಯಾಣಸ್ವಾಮಿಯ ಯೋಜನೆ ಯಶಸ್ವಿಯಾಗಲಿಲ್ಲ.

ಅತ್ತ ಮಂಗಳೂರಿನ ನೆರವಿಗೆ ಮುಂಬಯಿಯಿಂದ ಸೈನ್ಯ, ಮದ್ದುಗುಂಡು, ಸಮರ ಸಾಧನಗಳು ಬರುವ ವ್ಯವಸ್ಥೆಯಾಯಿತು. ಸೈನಿಕರನ್ನೂ, ಸಾಮಾನನ್ನೂ ಒಯ್ಯಲು ಹಡಗುಗಳು ಸಿದ್ಧವಾದವು. ಹೊನ್ನಾವರದ ಸಬ್–ಕಲೆಕ್ಟರು ಮಂಗಳೂರಿನ ಸಹಾಯಕ್ಕೆ ೬೦ ಮಂದಿಯನ್ನು ಕಳಿಸಿದ. ಧಾರವಾಡ, ಬೆಳಗಾಂಗಳಿಂದ ಸೈನ್ಯಗಳು ಮಂಗಳೂರಿಗೆ ಹೊರಟವು. ಕೆನರಾ ಸೈನ್ಯಗಳ ನಾಯಕ ಬ್ರಿಗೇಡಿಯರ್ ಆಲನ್‌ಗೆ ಮಂಗಳೂರಿನ ಸುದ್ದಿ ಹೋಯಿತು. ಕೂಡಲೇ ಕರ್ನಲ್ ಗ್ರೀನ್ ಮುಂದಾಳುತನದಲ್ಲಿ ಸ್ವಲ್ಪ ಸೈನಿಕರನ್ನು ಮಂಗಳೂರಿಗೆ ಕಳುಹಿಸಲಾಯಿತು. ಏಪ್ರಿಲ್ ೧೬ರ ಹೊತ್ತಿಗೆ ಬ್ರಿಟಿಷ್ ಅಧಿಕಾರಿಗಳೆಲ್ಲ ಸೇರಿ ಸಮಾಲೋಚನೆ ನಡೆಸಿ ಹೋರಾಟಗಾರರನ್ನು ಎದುರಿಸುವ ನಿಶ್ಚಯ ಮಾಡಿದರು. ೧೨೦೦ ಮಂದಿ ಯುರೋಪಿಯನ್ನರು ಮತ್ತು ಸಿಪಾಯಿಗಳ ನೇತೃತ್ವವನ್ನು ಗ್ರೀನ್ ವಹಿಸಿದ. ಬಂಟ್ವಾಳದ ಹತ್ತಿರ ಉಳಿದುಕೊಂಡ. ಈ ಹೋರಾಟದಲ್ಲಿ ಬ್ರಿಟಿಷರಿಗೆ ಆದ ಒಂದು ಅನುಕೂಲವೆಂದರೆ ಇದರಲ್ಲಿ ಕೊಡಗಿನ

ಹಲವರು ಭಾಗವಹಿಸಿರಲಿಲ್ಲ, ಅಲ್ಲದೆ ಬ್ರಿಟಿಷರಿಗೆ ಸಹಾಯ ಮಾಡಿದರು. ದಿವಾನ ಬೋಪು ಸುಳ್ಯವನ್ನು ವಶಪಡಿಸಿಕೊಂಡ. ಹಲವು ಕಡೆ ಬ್ರಿಟಿಷರ ಸುಸಜ್ಜಿತ ಸೇನೆಗೂ, ಕ್ರಾಂತಿ ಪಡೆಗೂ ನಡುವೆ ಭೀಕರ ಕಾಳಗ ನಡೆಯಿತು. ಉಗ್ರ ಹೋರಾಟ ನಡೆಸಿದರೂ ಬಂಡಾಯಗಾರರಿಗೆ ಮಂಗಳೂರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪ್ರಮುಖ ನಾಯಕರು ಬ್ರಿಟಿಷರ ಕೈವಶವಾದರು.

ಮಂಗಳೂರನ್ನು ಬ್ರಿಟಿಷರು ವಶಪಡಿಸಿಕೊಂಡ ನಂತರ ಬೆಳ್ಳಾರೆ, ಸುಳ್ಯವನ್ನು ಕೈವಶಮಾಡಿಕೊಳ್ಳಲು ಕಾರ್ಯಯೋಜನೆಗಳನ್ನು ರೂಪಿಸಿತು. ಅದರಂತೆ ಸೈನ್ಯವು ಸುಳ್ಯ ಪರಿಸರಕ್ಕೆ ಎರಡು ಕಡೆಯಿಂದ ದಾಳಿ ಮಾಡಬೇಕು. ಮೊದಲನೆಯದಾಗಿ ಮಡಿಕೇರಿ ಕಡೆಯಿಂದ ದಿವಾನ ಬೋಪುವಿನ ನೇತೃತ್ವದಲ್ಲಿ ಒಂದು ತುಕಡಿ ಸೈನ್ಯವು ಸುಳ್ಯದ ಕಡೆಗೆ ನುಗ್ಗಬೇಕು. ಎರಡನೆಯದಾಗಿ ಮಂಗಳೂರಿನ ಕಡೆಯಿಂದ ಕರ್ನಲ್ ಲೂವಿಸ್ ನೇತೃತ್ವದಲ್ಲಿ ಪುತ್ತೂರು ಮೂಲಕ ಸೈನ್ಯ ಬೆಳ್ಳಾರೆಯ ಕಡೆಗೆ ಚಲಿಸುವುದು. ಬೋಪುವಿನ ಸೈನ್ಯವು ಏಪ್ರಿಲ್ ೨೪ ರಂದು ಸುಳ್ಯವನ್ನು ವಶಪಡಿಸಿಕೊಂಡಿತು. ಅಂದು ಸುಬೇದಾರ ಕೃಷ್ಣ ಬಂಧಿಸಲ್ಪಟ್ಟನು. ಊಕಣ್ಣ ಬಂಟ, ಅಣ್ಣಿಗೌಡ, ಕೋಲ್ಚಾರು ಕೂಸಣ್ಣ ಗೌಡ ಮೊದಲಾದವರು ಹೋರಾಟದಲ್ಲಿ ಪ್ರಾಣ ಕಳೆದುಕೊಂಡರು. ಮಂಗಳೂರಿನಿಂದ ಬಂದ ಲೂವಿಸನ ಸೈನ್ಯವು ಸುಳ್ಯ ಪತನವಾದ ನಾಲ್ಕು ದಿನಗಳ ನಂತರ ಅಂದರೆ ಏಪ್ರಿಲ್ ೨೯ ರಂದು ಬೆಳ್ಳಾರೆಯನ್ನು ವಶಪಡಿಸಿಕೊಂಡಿತು. ಈ ಕಾದಾಟದಲ್ಲಿ ಕೂಜುಗೋಡು ಮಲ್ಲಪ್ಪಗೌಡ ಮತ್ತು ಅಪ್ಪಯ್ಯಗೌಡರು ಪ್ರಾಣ ಕಳಕೊಂಡರು. ಬೆಳ್ಳಾರೆಯ ಪತನದೊಂದಿಗೆ ಬ್ರಿಟಿಷರು ಕಳೆದುಕೊಂಡ ಪ್ರದೇಶಗಳನ್ನು ಪೂರ್ತಿಯಾಗಿ ಮತ್ತೆ ಹಿಂದೆ ಪಡೆದಂತಾಯಿತು. ಇದರೊಂದಿಗೆ ಹೋರಾಟವೂ ಪೂರ್ತಿಯಾಗಿ ಕೊನೆಗೊಂಡಿತು. ೧೮೩೭ರ ಜೂನ್ ೨೮ ರಂದು ಬ್ರಿಗೇಡಿಯರ್ ಆಲನ್ ಎಂಬವನು ಕೆನರಾ ಮತ್ತೆ ಸಹಜ ಸ್ಥಿತಿಗೆ ಬಂದಿದೆ ಎಂದು ಘೋಷಿಸಿ, ಮಾರ್ಷಲ್ ಲಾವನ್ನು ಹಿಂದೆಗೆದುಕೊಂಡನು. ಸುಮಾರು ನಾಲ್ಕು ವರ್ಷಗಳ ದೀರ್ಘ ತಯಾರಿಯ ಅನಂತರ ೩೦ ದಿನಗಳ ಕಾಲ ನಡೆದ ಅಮರಸುಳ್ಯದ ರೈತ ಹೋರಾಟವು ಈ ರೀತಿ ಕೊನೆಯಾಯಿತು.



**ವಿಚಾರಣೆ**

ಹೋರಾಟಗಾರರಲ್ಲಿ ಸಾಕಷ್ಟು ಮಂದಿ ಸೆರೆ ಸಿಕ್ಕರು. ಕೆಲವರು ತಪ್ಪಿಸಿಕೊಂಡರು. ಹೋರಾಟದಲ್ಲಿ ಎಷ್ಟು ಜನ ಮಡಿದರೆಂದು ಯಾವ ವರದಿಯೂ ಹೇಳುವುದಿಲ್ಲ. ತಪ್ಪಿಸಿಕೊಂಡವರಲ್ಲಿ ಪ್ರಮುಖರೆಂದರೆ ಕಲ್ಯಾಣಸ್ವಾಮಿ, ಮಂಡೀರ ಉತ್ತು, ಶಾಂತಳ್ಳಿ ಮಲ್ಲಯ್ಯ, ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ, ಚೆಟ್ಟಿ ಕುಡಿಯ, ಕುರ್ತ ಕುಡಿಯ, ಲಕ್ಷ್ಮಪ್ಪ ಬಂಗರಸ. ಇವರೆಲ್ಲ ಸೆರೆ ಸಿಕ್ಕಿದ ಮೇಲೆಯೂ ಕಲ್ಯಾಣಸ್ವಾಮಿ ಸಿಕ್ಕಿರಲಿಲ್ಲ. ಅವನನ್ನು ಹಿಡಿದುಕೊಟ್ಟವರಿಗೆ ೧೦,೦೦೦ ರೂಪಾಯಿ ಮತ್ತು ಕುಕನೂರು ಚೆನ್ನಯ್ಯ, ಕೆದಂಬಾಡಿ ರಾಮ ಗೌಡ, ಕರಣಿಕ ಸುಬ್ರಾಯರನ್ನು ಹಿಡಿದು ಕೊಟ್ಟವರಿಗೆ ತಲಾ ೫,೦೦೦ ರೂಪಾಯಿ ಬಹುಮಾನವನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಸರಕಾರವು ಘೋಷಿಸಿತು. ಆ ಕಾಲದಲ್ಲೇ ಇಷ್ಟು ದೊಡ್ಡ ಮೊತ್ತದ ಬಹುಮಾನ ಘೋಷಿಸಬೇಕಾದರೆ ಆರೋಪಿಗಳ ಮಹತ್ವ ಏನೆಂಬುದು ಗೊತ್ತಾಗುತ್ತದೆ.

ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಕಡಬದಲ್ಲಿ ಕಲ್ಯಾಣಸ್ವಾಮಿಯ ತಂಡದವರಿಗೂ, ಕರ್ನಲ್ ವಿಲಿಯಮ್ಸ್ ತಂಡಕ್ಕೂ ಯುದ್ಧವು ನಡೆದು ಕಲ್ಯಾಣಸ್ವಾಮಿಯ ಕಡೆಯವರು ಸೋತು ಕೇವಲ ೨೦–೩೦ ಅನುಯಾಯಿಗಳು ಉಳಿದರು. ಆದರೂ ಕಲ್ಯಾಣಸ್ವಾಮಿಯು ತಪ್ಪಿಸಿಕೊಂಡನು. ಅವನು ತಪ್ಪಿಸಿಕೊಳ್ಳದಂತೆ ತಡೆಯುವುದಕ್ಕಾಗಿ ದಿವಾನ ಬೋಪು ಮತ್ತು ದಿವಾನ ಪೊನ್ನಪ್ಪ ಕ್ರಮವಾಗಿ ತೊಡಿಕಾನ ಮತ್ತು ಸಂಪಾಜೆ ಪರಿಸರದಲ್ಲಿ ಕಾವಲು ನಿಂತರು. ಶಿಶಿಲದ ಕಾಡುಗಳಲ್ಲಿ ಕರ್ನಲ್ ವಿಲಿಯಮ್ಸ್ ಕಾವಲು ನಿಂತನು. ಇಂತಹ ಕಠಿಣ ಕಾವಲಿಗೂ ಸಿಗದೆ ಕಲ್ಯಾಣಸ್ವಾಮಿಯು ಕುಮಾರ ಪರ್ವತವನ್ನು ಹತ್ತಿ ಒಣಗೂರನ್ನು ತಲುಪಿದನು. ಅಲ್ಲಿಂದ ಶಿವಮೊಗ್ಗಕ್ಕೆ ಹೋಗುವುದು ಅವನ ಯೋಜನೆಯಾಗಿತ್ತು. ಹೀಗೆ ಪರಾರಿಯಾಗುವಾಗ ಕಲ್ಯಾಣಸ್ವಾಮಿಯು ಬಿಸಿಲೆ ಘಟ್ಟಕ್ಕೆ ಹೋಗುವ ಮುಖ್ಯ ರಸ್ತೆಯ ಬಳಿ ತನ್ನ ರಾಜ ದಿರಸನ್ನು ಎಸೆದು ಜಂಗಮ ವೇಷಧಾರಿಯಾಗಿ ೧೫ ಮಂದಿ ಸಹಾಯಕರೊಂದಿಗೆ ಕಾಡುದಾರಿಯಲ್ಲಿ ಸಾಗಿ ಮಂಜರಾಬಾದ್ ಬಳಿ ಅಡಿಹೊಳೆಯ ಸಮೀಪ ಇರುವ ತನ್ನ ಊರಿಗೆ ಹೋದನು. ಕಲ್ಯಾಣಸ್ವಾಮಿಯ ಮನೆಯಲ್ಲಿ ಅವನನ್ನು

ಬಿಟ್ಟು ಅವನ ಸಂಗಡಿಗರು ಅವರವರ ಊರುಗಳಿಗೆ ಹೋದರು. ಕಲ್ಯಾಣಸ್ವಾಮಿ ತನ್ನ ಮನೆಯಲ್ಲಿ ಎರಡು ದಿನ ಕಳೆಯುವುದರೊಳಗಾಗಿ ಅವನನ್ನು ಹಿಡಿದು ಕೊಟ್ಟವರಿಗೆ ೧೦,೦೦೦ ರೂಪಾಯಿ ಬಹುಮಾನದ ಘೋಷಣೆ ಹೊರಬಿತ್ತು. ಈ ಘೋಷಣೆ ಬಂದ ಮೇಲೆ ಕಲ್ಯಾಣಸ್ವಾಮಿಯು ಹಗಲೆಲ್ಲ ಕಾಡಲ್ಲಿ ಅವಿತಿದ್ದು ರಾತ್ರಿ ಊಟಕ್ಕೆ ಮನೆಗೆ ಬರತೊಡಗಿದನು. ಒಂದು ಸಂಜೆ ಕಾಡಿನಿಂದ ಬರುತ್ತಿದ್ದ ಕಲ್ಯಾಣಸ್ವಾಮಿಯನ್ನು ನೋಡಿದ ಅವರ ಮಾವ ಕರಿಬಸಯ್ಯ ಸುಬೇದಾರ್ ಮಾದಯ್ಯ ಅವರಿಗೆ ಕಲ್ಯಾಣಸ್ವಾಮಿಯನ್ನು ಹಿಡಿದುಕೊಟ್ಟನು. ಹೀಗೆ ೧೮೩೭ರ ಮೇ ೫ರಂದು ಕಲ್ಯಾಣಸ್ವಾಮಿಯ ಬಂಧನವಾಯಿತು.

೧೮೩೭ರ ಮೇ ೧೫ರಂದು ಮಂಗಳೂರಿನಲ್ಲಿ ಆರೋಪಿಗಳ ವಿಚಾರಣೆ ಪ್ರಾರಂಭವಾಯಿತು. ಕಲ್ಯಾಣಸ್ವಾಮಿಯು ತಾನು ನಿರಪರಾಧಿ ಎಂದೂ, ಹೆಮ್ಮನಿ ಗ್ರಾಮದ ಪುಟ್ಟ ಬಸಪ್ಪನೆಂದೂ, ಜಾತಿಯಲ್ಲಿ ಲಿಂಗಾಯಿತನೆಂದೂ, ಹಾಲೇರಿ ವಂಶಕ್ಕೂ ತನಗೂ ಯಾವ ಸಂಬಂಧವೂ ಇಲ್ಲವೆಂದೂ, ಕೆದಂಬಾಡಿ ರಾಮ ಗೌಡರ ಕಡೆಯ ಜನರ ಒತ್ತಾಯಕ್ಕೆ ಮಣಿದು ಕಲ್ಯಾಣಸ್ವಾಮಿಯ ವೇಷದಲ್ಲಿ ರೈತನನ್ನು ಸಂಘಟಿಸಿದ್ದಾಗಿಯೂ ಹೇಳಿಕೆಯನ್ನು ನೀಡಿದನು. ವಿಚಾರಣೆಯೆಲ್ಲ ನಡೆದು ಅವನಿಗೆ ಗಲ್ಲು ಶಿಕ್ಷೆಯಾಯಿತು.

೧೮೩೭ರ ಬಂಡಾಯದಲ್ಲಿ ಪ್ರಮುಖ ಪಾತ್ರ ವಹಿಸಿದ ಲಕ್ಷ್ಮಪ್ಪ ಬಂಗರಸನನ್ನು ೧೮೩೭ರ ಮೇ ೨೩ ರಂದು, ಉಪ್ಪಿನಂಗಡಿಯ ಮಂಜನನ್ನು ಮೇ ೩೦ ರಂದು ಮತ್ತು ಪುಟ್ಟ ಬಸಪ್ಪ(ಕಲ್ಯಾಣಸ್ವಾಮಿ)ನನ್ನು ಜೂನ್ ೧೯ ರಂದು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸುತ್ತಾರೆ. ಉಪ್ಪಿನಂಗಡಿಯ ಮಂಜ ಕಂಪೆನಿ ಸರಕಾರದಲ್ಲಿ ಪ್ಯೂನ್ ಆಗಿದ್ದು ನಿವೃತ್ತನಾಗಿದ್ದನು ಎಂಬುದನ್ನು ಬಿಟ್ಟರೆ ಅವರ ಬಗ್ಗೆ ವಿವರಗಳು ಲಭ್ಯವಿಲ್ಲ. ಮಂಗಳೂರಿನಲ್ಲಿ ಮೂಡುಬಿದಿರೆ ಕಡೆಗೆ ಹೋಗುವ ಮಾರ್ಗ ಪ್ರಾರಂಭದಲ್ಲಿ ಬಿಕರ್ನಕಟ್ಟೆ ಇದೆ. ಬಿಕರ್ನಕಟ್ಟೆ ಎಂಬ ಹೆಸರು ಹೇಗೆ ಬಂತೆಂಬುದನ್ನು ಹಿರಿಯರು ಹೀಗೆ ಹೇಳುತ್ತಾರೆ– ಹಿಂದೆ ಇಲ್ಲಿ ಆಲದಮರದ ಒಂದು ಬದಿಯಲ್ಲಿ ಕಲ್ಲಿನ ಕಟ್ಟೆಯೊಂದಿತ್ತು. ಅಲ್ಲಿ ಬ್ರಿಟಿಷ್ ನ್ಯಾಯಾಧಿಕಾರಿಗಳು ಮತ್ತು ಕಲೆಕ್ಟರ್ ಲೂವಿನ್ ಕುಳಿತುಕೊಂಡು ಸೈನಿಕರಿಗೆ ಬಂಧಿತ ಲಕ್ಷ್ಮಪ್ಪ ಬಂಗರಸನನ್ನು ಕರೆತರಲು ಸಂಜ್ಞೆ ಮಾಡುತ್ತಾರೆ. ಸೈನಿಕರು ಲಕ್ಷ್ಮಪ್ಪ ಬಂಗರಸನನ್ನು ಮರದ ಬಳಿಗೆ ಕರೆತರುತ್ತಾರೆ. ಒಬ್ಬ ಸೈನಿಕ



ಮರ ಹತ್ತಿ ತುದಿಯಲ್ಲಿ ಕುಣಿಕೆ ಉಳ್ಳ ಒಂದು ಹಗ್ಗವನ್ನು ಗೆಲ್ಲುಗಳಿಂದ ಇಳಿಬಿಡುತ್ತಾನೆ. ಆ ಕುಣಿಕೆಯನ್ನು ಬಂಗರಸನ ಕುತ್ತಿಗೆಗೆ ಸಿಕ್ಕಿಸಿ ಕೊಡದಲ್ಲಿ ನೀರೆಳೆದಂತೆ ಮೇಲಕ್ಕೆಳೆದು ಅವನನ್ನು ಕೊಲ್ಲುತ್ತಾರೆ. ಅದನ್ನು ನೇತುಹಾಕಿದ ಸ್ಥಿತಿಯಲ್ಲಿ ಕಾಗೆ ಹದ್ದುಗಳಿಗೆ ಆಹಾರವಾಗಿ ನೀಡಲಾಗುತ್ತದೆ. ಬ್ರಿಟಿಷರಿಗೆ ಎದುರಾಗಿ ನಿಂತರೆ ಏನಾಗುತ್ತದೆ ಎಂಬುದನ್ನು ನೇರವಾಗಿ ತೋರಿಸಲು ಹಾಗೆ ಮಾಡಲಾಯಿತು. ಕೆಲವು ಸಮಯದ ಬಳಿಕ ಉಪ್ಪಿನಂಗಡಿ ಮಂಜನನ್ನೂ ಹಾಗೆ ಹೃದಯ ವಿದ್ರಾವಕವಾಗಿ ನೇಣಿಗೇರಿಸಿ ಕೊಲ್ಲಲಾಯಿತು. ಜನ ಈ ಘಟನೆಗಳಿಂದ ನಡುಗಿಹೋದರು. ಬ್ರಿಟಿಷರು ನೀಡಿದ ಭೀಕರವಾದ ನ್ಯಾಯದಿಂದಾಗಿ 'ಭೀಕರ ನ್ಯಾಯದ ಕಟ್ಟೆ' ಎಂಬ ಹೆಸರು ಬಂದು ಕಾಲ ಕ್ರಮೇಣ ಅದು ಜನರ ಬಾಯಲ್ಲಿ ಬಿಕರ್ನಕಟ್ಟೆ ಆಯಿತೆಂದು ಹೇಳುತ್ತಾರೆ.

ಅಪ್ಪಯ್ಯ ಗೌಡನನ್ನು ಪ್ರಧಾನ ಹೋರಾಟಗಾರ ಎಂದು ಘೋಷಿಸಿದ ಬ್ರಿಟಿಷ್ ಆಡಳಿತವು ೩೧ ಅಕ್ಟೋಬರ್ ೧೮೩೭ರಂದು ಬೆಳಗ್ಗೆ ೧೦ ಗಂಟೆಗೆ ಮಡಿಕೇರಿ ಕೋಟೆಯ ಮುಂಭಾಗದಲ್ಲಿ ಗಲ್ಲಿಗೇರಿಸಿತು. ಅಪ್ಪಯ್ಯ ಗೌಡನನ್ನು ಗಲ್ಲಿಗೇರಿಸುವುದನ್ನು ತೋರಿಸಲು ರೈತರು, ಪಟೇಲರು ಮತ್ತು ಬಂಡೆದ್ದ ಇತರರನ್ನು ಕರೆಸಲಾಗಿತ್ತು. ಅಪ್ಪಯ್ಯ ಗೌಡನ ಹೆಂಡತಿಯನ್ನು ಧಾರೆ ಸೀರೆಯ ಸಹಿತ ಬರಬೇಕೆಂದು ತಿಳಿಸಲಾಗಿತ್ತು. ಬ್ರಿಟಿಷರ ಮೇಲೆ ಜನರಲ್ಲಿ ಜಾಸ್ತಿ ಭಯ ಹುಟ್ಟಿಸಬೇಕೆಂಬ ಉದ್ದೇಶದಿಂದ ಹಾಗೆ ಮಾಡಿದ್ದರು.

ಕೆದಂಬಾಡಿ ರಾಮಯ್ಯಗೌಡ, ಅವನ ಮಗ ಸಣ್ಣಯ್ಯ ಗೌಡ ಹಾಗೂ ಚೆಟ್ಟಿ ಕುಡಿಯ, ಕುಕ್ಕುನೂರು ಚೆನ್ನಯ್ಯ, ಕೂಜುಗೋಡು ಮಲ್ಲಪ್ಪ ಗೌಡ, ಬೀರಣ್ಣ ಬಂಟ, ಕಾರ್ಯಕಾರ ಸುಬೇದಾರ ಕೃಷ್ಣಯ್ಯ, ಮಂಗಳೂರನ್ನು ಗೆದ್ದಾಗ ಹಾಲೇರಿಯ ಧ್ವಜ ಹಾರಿಸಿದ ಗುಡ್ಡೆಮನೆ ತಮ್ಮಯ್ಯ ಗೌಡ ಮೊದಲಾದವರನ್ನು ಪ್ರಾಣಿಗಳಂತೆ ಬೋನಿನಲ್ಲಿ ತುಂಬಿಸಿ ಸಿಂಗಾಪುರ, ಬರ್ಮಾ ಮುಂತಾದ ಸಮುದ್ರದಾಚೆಗಿನ ಊರುಗಳಿಗೆ ಸಾಗಹಾಕಿ ಬದುಕಿನುದ್ದಕ್ಕೂ ಕೈಕಾಲುಗಳಿಗೆ ಕೋಳ ಮತ್ತು ಸಂಕೋಲೆ ತೊಡಿಸಿ ರಸ್ತೆ ನಿರ್ಮಾಣದಂತಹ ದೈಹಿಕ ಶ್ರಮದ ಸೇವೆಗಳಿಗೆ ಬಳಸಿಕೊಳ್ಳಲಾಯಿತು.

ಉಳುವಾರು ಕೃಷ್ಣ, ಗೌಡಳ್ಳಿ ಸುಬ್ಬಪ್ಪು, ಕುಕ್ಕೆಟ್ಟಿ ಸುಬ್ಬ, ಶೇಕ್, ದೇರಾಜೆ ಬಚ್ಚ ಪಟೇಲ, ನೆಡುಂಪಳ್ಳಿ ದೇವಪ್ಪ ರೈ, ಗುಂಡ್ಲ ಸುಬ್ಬಪ್ಪ ಮತ್ತು ಇತರ

ಕೆಲವರಿಗೆ ಜೀವಾವಧಿ ಶಿಕ್ಷೆ ನೀಡಲಾಗಿದೆ. ಇನ್ನು ಹಲವು ಮಂದಿಗೆ ೧೪ ವರ್ಷ, ೧೦ ವರ್ಷ ಮತ್ತು ೭ ವರ್ಷಗಳ ಕಾರಾಗೃಹವಾಸದ ಶಿಕ್ಷೆ ವಿಧಿಸಿದ್ದಾರೆ. ಮಾನ್ಯದ ರಂಗಪ್ಪ ರಣರಂಗದಲ್ಲಿ ಮೃತಪಟ್ಟರೆ, ಚೆರಂಜಿ ಸುಬ್ರಾಯ ಗಾಯಾಳುವಾಗಿ ಸೆರೆ ಸಿಕ್ಕಾತ ಜೈಲಿನಲ್ಲಿ ಸಾವನ್ನಪ್ಪುತ್ತಾನೆ.

ಅಮರಸುಳ್ಯ ಹೋರಾಟದ ಮುಂದಾಳುಗಳೆಲ್ಲ ಬ್ರಿಟಿಷರಿಗೆ ಸೆರೆ ಸಿಕ್ಕಿ ಮುಂದೆ ಘೋರ ಶಿಕ್ಷೆಗೆ ಒಳಪಟ್ಟರೂ ಅವರಿಗೆ ಪುಟ್ಟ ಬಸಪ್ಪನನ್ನು ಹೋರಾಟದ ಮುಖ್ಯ ವೇದಿಕೆಗೆ ಕರೆತಂದ ಹುಲಿ ಕಡಿದ ನಂಜಯ್ಯನ ಸುಳಿವನ್ನು ಕಂಡು ಹಿಡಿಯಲು ಸಾಧ್ಯವಾಗುವುದಿಲ್ಲ.

**ಬಹುಮಾನಗಳು**

ಈ ದಂಗೆಯನ್ನು ಅಡಗಿಸಲು ನೆರವಾದವರಿಗೆ ಬಹುಮಾನಗಳು ಸಿಕ್ಕವು. ಪುತ್ತೂರಿನಿಂದ ಬರುತ್ತಿದ್ದ ಲೆವಿನ್ ಸಿಬ್ಬಂದಿಗೆ ಸೂಕ್ತ ಸಮಯದಲ್ಲಿ ಆಹಾರ ಮತ್ತು ಸಹಾಯ ನೀಡಿದ್ದಕ್ಕಾಗಿ ರಂಗ ಬಾಳಿಗ ಅವರಿಗೆ ಮೂರು ತಲೆಮಾರಿನವರೆಗೆ ಭೂಕಂದಾಯವನ್ನು ಮನ್ನಾ ಮಾಡಲಾಯಿತು. ಪಾಡಿ ಸುಬ್ಬಯ್ಯ ಶಾನುಭೋಗ ಅವರು ಬ್ರಿಟಿಷರಿಗೆ ನೀಡಿದ ಸಹಾಯಕ್ಕಾಗಿ ಜೋಡು ಬಳೆಯನ್ನು ನೀಡಲಾಯಿತು. ಬಂಡಾಯವನ್ನು ಅಡಗಿಸಿದ ೨೫ ಜನರಿಗೆ ಜೋಡು ಕೊಳದ ಕೋವಿಗಳನ್ನು, ೧೪ ಜನರಿಗೆ ಕುದುರೆಗಳನ್ನು ಕೊಡಲಾಯಿತು. ಚಿನ್ನ–ಬೆಳ್ಳಿ ಪದಕಗಳನ್ನು ಕೊಟ್ಟು ಗೌರವಿಸಲಾಯಿತು. ಬಂಡಾಯಗಾರರು ಲೂಟಿ ಮಾಡಿದ್ದ ಖಜಾನೆಯನ್ನು ಇಡಿಯಾಗಿ ಬೋಪು ದಿವಾನರು ಮತ್ತು ಅವರ ಸಂಗಡಿಗರಿಗೆ ಕೊಡಲಾಯಿತು. ಅವರು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದ್ದರಿಂದ ಜಹಗೀರು ಮತ್ತು ಉಂಬಳಿಗಳನ್ನು ಕೊಡಲಾಯಿತು.

# ಉಪಸಂಹಾರ

೧೮೫೭ರ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ೨೦ ವರ್ಷಗಳ ಮೊದಲೇ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಜನತೆ ಸಿಡಿದೆದ್ದ ಅಸಾಧಾರಣ ಘಟನೆ ಅಮರಸುಳ್ಯದ ಸ್ವಾತಂತ್ರ್ಯ ಸಮರ. ಬರೇ ಸುಳ್ಯವೆಂಬ ಸೀಮೆಯೇ ಕೇಂದ್ರಬಿಂದುವಾಗಿ ನಡೆದ ಈ ಹೋರಾಟವು ರಾಜ – ರಾಜರುಗಳ ನಡುವೆ ಅಥವಾ ರಾಜ ಮತ್ತು ಬ್ರಿಟಿಷರ ನಡುವೆ ನಡೆದ ಸಂಗ್ರಾಮ ಅಲ್ಲ. ಬ್ರಿಟಿಷರ ಕಂದಾಯ ನೀತಿಯನ್ನು ಪ್ರಶ್ನಿಸಿ, ಜಾತಿ – ಧರ್ಮಗಳನ್ನು ಮೀರಿ ರೈತರು ನಡೆಸಿದ ಹೋರಾಟ. ಇದು ಪ್ರಾದೇಶಿಕ ಬಂಡಾಯವಾದರೂ ರಾಷ್ಟ್ರೀಯ ವ್ಯಾಪ್ತಿಯುಳ್ಳದ್ದು. ಅದಕ್ಕೇ ಈ ಹೋರಾಟಕ್ಕೆ ಅಷ್ಟು ಮಹತ್ವ. ಹೋರಾಟಗಾರರು ಬ್ರಿಟಿಷರ ಬಾವುಟವನ್ನು ೧೩ ದಿನಗಳ ಕಾಲ ಕೆಳಗಿಳಿಸಿ ಆಡಳಿತ ನಡೆಸಿದ್ದು ಸಾಮಾನ್ಯ ಸಂಗತಿ ಅಲ್ಲ. ಹೋರಾಟಗಾರರು ತಮ್ಮ ಧ್ವಜವನ್ನೇರಿಸಿದ್ದು ಅಲ್ಪಕಾಲವಾದರೂ ಪರಿಣಾಮ ಚಿರಕಾಲದ್ದು. ಈ ಬಂಡಾಯವನ್ನು ಹತ್ತಿಕ್ಕಲು ಸ್ಥಳೀಯ ಪಿತೂರಿಗಾರರು ಬ್ರಿಟಿಷ್ ಸರಕಾರದೊಂದಿಗೆ ಕೆಲಸ ಮಾಡಿದ್ದಾರೆ. ಪಿತೂರಿಗಾರರ ನೆರವಿಲ್ಲದೆ ಇದ್ದಿದ್ದರೆ ಈ ಹೋರಾಟಗಾರರನ್ನು ಹಿಡಿಯುವುದು ಬ್ರಿಟಿಷರಿಗೆ ಅಸಾಧ್ಯದ ಮಾತಾಗಿತ್ತು. ಆದರೂ ಈ ಹೋರಾಟಕ್ಕೆ ಕಾಟಕಾಯಿ(ಲೂಟಿ) ಎಂಬ ಹೆಸರು ಬರಲು ಬ್ರಿಟಿಷರು ಮತ್ತು ಬ್ರಿಟಿಷ್ ಪರ ವ್ಯಕ್ತಿಗಳು ಮಾಡಿದ ಅಪಪ್ರಚಾರವೇ ಕಾರಣವಾಗಿತ್ತು. ಬ್ರಿಟಿಷರು ಸುಳ್ಳು ಹೇಳಿ ಕೊಡಗರು ಮತ್ತು ಅಮರಸುಳ್ಯದ ಜನರ ನಡುವೆ ವೈಷಮ್ಯ ತಂದಿಟ್ಟರು. ಕೊಡಗಿನ ಎರಡು ಪ್ರಮುಖ ಸಮುದಾಯಗಳಾದ ಗೌಡರ ಮತ್ತು ಕೊಡವರ ನಡುವೆ ಸಾಮರಸ್ಯ ಮೂಡದಂತೆ ಮಾಡಿದರು.

ಸುಳ್ಯ ಬೆಟ್ಟ ಗುಡ್ಡಗಳಿಂದ ಕೂಡಿದ ಮಲೆನಾಡಿನ ಒಂದು ಪುಟ್ಟ ಭೂಪ್ರದೇಶ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುದ್ದಿಯನ್ನು ದಾಟಿಸುವುದು

ಬಹುತೇಕ ಅಸಾಧ್ಯವಾಗಿದ್ದ ಹಾಗೂ ದೂರದೂರಿನ ಸಂಪರ್ಕ ದುರ್ಭರವಾಗಿದ್ದ ಸಮಯದಲ್ಲಿ ಈ ಪ್ರದೇಶದ ಜನರು ಸಂಘಟಿತರಾಗಿ ಬ್ರಿಟಿಷರೊಡನೆ ಹೋರಾಟ ನಡೆಸಿದ್ದು, ಅದೂ ಮೂರು ವರ್ಷಗಳ ಕಾಲ ಹೋರಾಟ ಮಾಡಿ ಪ್ರಾಣ ತ್ಯಾಗ ಮಾಡಿದ್ದು ಬಹಳ ವಿಶೇಷ. ಇದರ ಬಗ್ಗೆ ಕನ್ನಡಿಗರಾದ ನಾವೆಲ್ಲರೂ ಹೆಮ್ಮೆಪಡಬೇಕು. ಇಷ್ಟೆಲ್ಲಾ ನಡೆದಿದ್ದರೂ ಈ ಹೋರಾಟದ ಬಗ್ಗೆ ಸಾಕಷ್ಟು ಅಧ್ಯಯನಗಳು, ಪುಸ್ತಕಗಳು ಬಂದಿದ್ದರೂ ನಮಗೆ ಇನ್ನೂ ಎಷ್ಟೋ ವಿಷಯಗಳಲ್ಲಿ ಸ್ಪಷ್ಟತೆ ಇಲ್ಲ. ಉದಾಹರಣೆಗೆ ಅಪರಂಪಾರ ಯಾರು? ಕಲ್ಯಾಣಸ್ವಾಮಿ ಎಲ್ಲಿಂದ ಬಂದ? ಇಂತಹ ಅನೇಕ ವಿಷಯಗಳ ಬಗ್ಗೆ ಗೊಂದಲಗಳಿವೆ. ಹಲವು ಸಂಶಯಗಳು ಹಾಗೆಯೇ ಉಳಿದುಕೊಂಡಿವೆ. ಹಾಗಾಗಿ ಈ ಕುರಿತು ಇನ್ನು ಮುಂದೆ ಕೂಡಾ ಅಧ್ಯಯನಗಳು ನಡೆಯಬೇಕಾಗಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೭೫ರ ವರ್ಷದಲ್ಲಿದ್ದೇವೆ. ಎಲ್ಲೆಡೆ ಸಡಗರದ ಅಮೃತ ಮಹೋತ್ಸವ ಆಚರಣೆ ನಡೆಯುತ್ತಿದೆ. ಇಂಥ ಸಮಯದಲ್ಲಿ ಕನ್ನಡನಾಡಿನ ಕರಾವಳಿ ಮತ್ತು ಕೊಡಗಿನ ಪರಿಸರದಲ್ಲಿ ನಡೆದ ಸ್ವಾತಂತ್ರ್ಯ ಸಮರವನ್ನು ಸ್ಮರಿಸುವುದು ಇಂದಿನ ದಿನದ ಆದ್ಯ ಕರ್ತವ್ಯ. ನಮ್ಮದೇ ಚರಿತ್ರೆಯ ವಿವರಗಳನ್ನು ಮುಂದಿನ ತಲೆಮಾರುಗಳಿಗೆ ತಲುಪಿಸುವುದು ನಮ್ಮ ಜವಾಬ್ದಾರಿ.

## ಆಕರ ಗ್ರಂಥಗಳು

೧. ಅರವಿಂದ ಚೊಕ್ಕಾಡಿ ೨೦೨೧, ಬ್ರಿಟಿಷರ ವಿರುದ್ಧ ಜನತಾ ಬಂಡಾಯ (೧೮೩೪–೧೮೩೭); ಮೈಸೂರು: ರೂಪ ಪ್ರಕಾಶನ.

೨. ದೇವಿಪ್ರಸಾದ್ ಎನ್. ಎಸ್. ಸಂಪಾಜೆ ೨೦೦೫, ಅಮರಸುಳ್ಯದ ಸ್ವಾತಂತ್ರ್ಯ ಸಮರ; ಸಂಪಾಜೆ: ಅಮರಕ್ರಾಂತಿ ಸಂಸ್ಮರಣಾ ಸಮಿತಿ.

೩. ಡಾ. ಪುರುಷೋತ್ತಮ ಬಿಳಿಮಲೆ ೨೦೨೧, ಅಮರಸುಳ್ಯದ ರೈತ ಹೋರಾಟ: ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.

೪. ಡಾ. ಪ್ರಭಾಕರ ಶಿಶಿಲ ೨೦೧೯, ಬೊಗಸೆ ತುಂಬಾ ಕನಸು; ಮೈಸೂರು: ರಾಜ್ ಪ್ರಕಾಶನ.


೫. ವಿದ್ಯಾಧರ ಕುಡೆಕಲ್ಲು ೨೦೨೧, ಅಮರಸುಳ್ಯ: ಸುಳ್ಯ: ಬಂಟಮಲೆ ಪ್ರಕಾಶನ.

# ಅನುಬಂಧ

## ಛಾಯಾಚಿತ್ರಗಳು








## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |